KAKB620003692012

Presented on : 06-02-2012
Registered on : 06-02-2012
Decided on : 04-04-2026
Duration : 14 years, 1 months, 27 days

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಡಾಧಿಕಾರಿಗಳು, ಜೇವರ್ಗಿ.

**<u>ದಿನಾಂಕ 04ನೇ ಏಪ್ರೀಲ ಮಾಹೆ 2026 ನೇ ಇಸವಿ</u>**

**<u>ಃ ಉಪಸ್ಥಿತರು ಃ</u>**

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್.ಎಲ್.ಬಿ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ.**

**<u>ಅಸಲು ದಾವಾ ಸಂಖ್ಯೆಃ 21/2012 & 191/2016</u>**

**<u>ವಾದಿಯರುಃ</u>**

1. ತಾಯಮ್ಮ ಗಂಡ ಮಲ್ಲಿಕಾರ್ಜುನ ದೇಸಾಯಿ
   ವಃ 55 ವರ್ಷ, ಉಃ ಮನೆಕೆಲಸ ,
   ಸಾಃ ಹೆಗ್ಗಣದೊಡ್ಡಿ ತಾಃ ಶಹಾಪೂರ ಜಿಃ ಯಾದಗಿರಿ,

**(ಶ್ರೀ ಎಸ್.ಆರ್.ಎ., ವಕೀಲರಿಂದ)**

**:ವಿರುದ್ದ :**

**<u>ಪ್ರತಿವಾದಿಯರುಃ</u>**

1. ಶರಣಮ್ಮ ಗಂಡ ಬಸವರಾಜ ದಾನಾ
   ವಃ55 ವರ್ಷ, ಉಃ ಮನೆ ಕೆಲಸ,
   ಸಾಃ ಬಳಬಟ್ಟಿ ತಾಃ ಜೇವರ್ಗಿ ಜಿಃ ಕಲಬುರ್ಗಿ,

2. ಗಂಗಮ್ಮ ಗಂಡ ಸೊಮಣ್ಣ ಯನಗುಂಟಿ
   ವಃ 36 ವರ್ಷ, ಉಃ ಮನೆಕೆಲಸ ,
   ಸಾಃ ಮಾಲಗತ್ತಿ ತಾಃ ಶಹಾಪೂರ ಜಿಃ ಯಾದಗಿರಿ,

3. ಶ್ರೀದೇವಿ ಗಂಡ ಸಂಗಪ್ಪ ಅಮ್ಮಾಪೂರ
   ವಯಃ 34 ವರ್ಷ ಉಃ ಮನೆಕೆಲಸ

KAKB620003692012

ಸಾಃ ಮಾಲಗತ್ತಿ ತಾಃ ಶಹಾಪೂರ ಜಿಃ ಯಾದಗಿರಿ,

4. ಶಿವಲೀಲಾ ತಂದೆ ಬಸವರಾಜ ದಾನಾ
 ವಯಃ 26 ವರ್ಷ ಉಃ ಮನೆಕೆಲಸ
 ಸಾಃ ಬಳಬಟ್ಟಿ ತಾಃ ಜೇವರ್ಗಿ ಜಿಃ ಕಲಬುರಗಿ
5. ರಾಚಣ್ಣ ತಂದೆ ಬಸವರಾಜ ದಾನಾ
 **(ಮೃತರಾಗಿರುತ್ತಾರೆ.)**
6. ವಿಶ್ವಣ್ಣ ತಂದೆ ಬಸವರಾಜ ದಾನಾ
 ವಯಃ 18 ವರ್ಷ ಉಃ ವಿದಾರ್ಥಿ
 ಸಾಃ ಬಳಬಟ್ಟಿ ತಾಃ ಜೇವರ್ಗಿ ಜಿಃ ಕಲಬುರಗಿ

**(1ನೇ ಪ್ರತಿವಾದಿಯ ಪರ ವಕೀಲರು ಶ್ರೀ ಎನ್.ಎಲ್.ಎಂ ವಕೀಲರು)**

**(2 , 4 ರಿಂದ 6 ನೇ ಪ್ರತಿವಾದಿಯ ಪರ ವಕೀಲರು ಶ್ರೀ ಕೆ.ಎನ್.ಪಿ ವಕೀಲರು)**

*****

| | | |
|---|---|---|
| ದಾವೆ ಸಲ್ಲಿಸಿದ ದಿನಾಂಕ | : | 06-02-2012 |
| ದಾವಾದ ಸ್ವರೂಪ | : | ಘೋಷಣೆ ಮತ್ತು<br>ಶಾಶ್ವತ ನಿರ್ಭಂಧಕಾಜ್ಞೆ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 20-03-2025 |
| ತೀರ್ಪಿನ್ನು ಘೋಷಿಸಿದ ದಿನಾಂಕ | : | 04-04-2026 |
| ಒಟ್ಟು ಕಾಲವಧಿ | : | ವರ್ಷ ತಿಂಗಳು ದಿನಗಳು<br>14 01 27 |

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ಹಾಗೂ ಪ್ರ ದ ನ್ಯಾ , ದಂಡಾಧಿಕಾರಿಗಳು,
ಜೇವರ್ಗಿ.

**<u>ಅಸಲು ದಾವಾ ಸಂಖ್ಯೆಃ 21/2012 ರ ಪಕ್ಷಗಾರರು</u>**

**<u>ವಾದಿಯರುಃ</u>**

1. ಗಂಗಮ್ಮ ತಂದೆ ಬಸವರಾಜ ದಾನಾ

KAKB620003692012

ವಃ 45 ವರ್ಷ, ಉಃ ಮನೆಕೆಲಸ ,
ಸಾಃ ಮಾಲಗತ್ತಿ ತಾಃ ಶಹಾಪೂರ ಜಿಃ ಯಾದಗಿರಿ,

2. ಶ್ರೀದೇವಿ ತಂದೆ ಬಸವರಾಜ ದಾನಾ
ವಯಃ 43 ವರ್ಷ ಉಃ ಮನೆಕೆಲಸ
ಸಾಃ ಮಾಲಗತ್ತಿ ತಾಃ ಶಹಾಪೂರ ಜಿಃ ಯಾದಗಿರಿ,

3. ಶಿವಲೀಲಾ ತಂದೆ ಬಸವರಾಜ ದಾನಾ
ವಯಃ 35 ವರ್ಷ ಉಃ ಮನೆಕೆಲಸ
ಸಾಃ ಬಳಬಟ್ಟಿ ತಾಃ ಯಡ್ರಾಮಿ ಗಿ ಜಿಃ ಕಲಬುರಗಿ

4. ರಾಚಣ್ಣ ತಂದೆ ಬಸವರಾಜ ದಾನಾ
**(ಮೃತರಾಗಿರುತ್ತಾರೆ.)**

5. ವಿಶ್ವನಾಥ ತಂದೆ ಬಸವರಾಜ ದಾನಾ
ವಯಃ 25 ವರ್ಷ ಉಃ ಒಕ್ಕಲುತನ
ಸಾಃ ಬಳಬಟ್ಟಿ ತಾಃ ಯಡ್ರಾಮಿ ಗಿ ಜಿಃ ಕಲಬುರಗಿ

**(ಶ್ರೀ ಕೆ.ಎನ್.ಟಿ., ವಕೀಲರಿಂದ)**

**:ವಿರುದ್ದ :**

**<u>ಪ್ರತಿವಾದಿಯರುಃ</u>**

1. ಶರಣಮ್ಮ ಗಂಡ ಬಸವರಾಜ ದಾನಾ
ವಃ63 ವರ್ಷ, ಉಃ ಮನೆ ಕೆಲಸ,
ಸಾಃ ಬಳಬಟ್ಟಿ ತಾಃ ಜೇವರ್ಗಿ ಜಿಃ ಕಲಬುರ್ಗಿ,

2. ತಾಯಮ್ಮ ಗಂಡ ಮಲ್ಲಿಕಾರ್ಜುನ ದೇಸಾಯಿ
ವಃ 63 ವರ್ಷ, ಉಃ ಮನೆಕೆಲಸ ,
ಸಾಃ ಹೆಗ್ಗಣದೊಡ್ಡಿ ತಾಃ ಶಹಾಪೂರ ಜಿಃ ಯಾದಗಿರಿ,

3. ಮಲ್ಲಿಕಾರ್ಜುನ ತಂದೆ ಶರಣಪ್ಪ ಮುಕ್ಕುಣ್ಣಿ
ವಯಃ 41 ವರ್ಷ ಉಃ ಸರ್ಕಾರಿಕೆಲಸ
ಸಾಃ ಬೆಂಗಳೂರು
**(1ನೇ ಪ್ರತಿವಾದಿಯ ಪರ ವಕೀಲರು ಶ್ರೀ ಎನ್.ಎಲ್.ಎಂ ವಕೀಲರು)**

KAKB620003692012

**(2 ಮತ್ತು 3 ನೇ ಪ್ರತಿವಾದಿಯ ಪರ ವಕೀಲರು ಶ್ರೀ ಬಿ.ಎಸ್.ಕೆ ವಕೀಲರು)**

*****

| | | |
|---|---|---|
| ದಾವೆ ಸಲ್ಲಿಸಿದ ದಿನಾಂಕ | : | 06-02-2012 |
| ದಾವಾದ ಸ್ವರೂಪ | : | ಘೋಷಣೆ ಮತ್ತು ಶಾಶ್ವತ ನಿರ್ಭಂಧಕಾಜ್ಞೆ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 20-03-2025 |
| ತೀರ್ಪಿನ್ನು ಘೋಷಿಸಿದ ದಿನಾಂಕ | : | 04-04-2026 |
| ಒಟ್ಟು ಕಾಲವಧಿ | : | ವರ್ಷ ತಿಂಗಳು ದಿನಗಳು<br>14 01 27 |

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ಹಾಗೂ ಪ್ರ ದ ನ್ಯಾ , ದಂಡಾಧಿಕಾರಿಗಳು,
ಜೇವರ್ಗಿ.

**<u>ತೀರ್ಪು</u>**

1. ಪ್ರಸ್ತುತ ದಾವೆಗಳನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಅಸಲು ದಾವಾ ಸಂಖ್ಯೆ 191/2016 ರ ತಾಯಮ್ಮ ಗಂಡ ಮಲ್ಲಿಕಾರ್ಜುನ ದೇಸಾಯಿ ಇವರು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಶರಣಮ್ಮ ಗಂಡ ಬಸವರಾಜ ದಾನಾ ಮತ್ತು ಇತರರ ವಿರುದ್ದ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಅಸಲು ದಾವಾ ಸಂಖ್ಯೆ 21/2012 ರ ಗಂಗಮ್ಮ ಗಂಡ ಬಸವರಾಜ ದಾನಾ ಇವರು, ಶರಣಮ್ಮ ಗಂಡ ಬಸವರಾಜ ದಾನಾ ವಿರುದ್ದ ಜಂಟಿ ಮಾಲೀಕತ್ವದ ಘೋಷಣೆ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಕೋರಿ

KAKB620003692012

ಸಲ್ಲಿಸಿರುತ್ತಾರೆ. ಸದರಿ ದಾವೆಗಳನ್ನು ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಇವರ ರಿಟ್ ನಂ.200038/2018 ರ ಆದೇಶದ ಮೇರೆಗೆ ಅಸಲು ದಾವಾ ನಂ21/2012 ನ್ನು, ಅಸಲು ದಾವಾ ನಂ.191/2016 ರಲ್ಲಿ ಕ್ಲಬ್ ಮಾಡಲಾಗಿರುತ್ತದೆ.

2. <u>**ಅಸಲು ದಾವಾ ನಂ 191/2016 ರ ವಾದ ಪತ್ರದ ಸಾರಾಂಶ ಈ ಕೆಳಕಂಡಂತಿರುತ್ತವೆ.**</u>

i) ದಾವಾ ಆಸ್ತಿಯು ಬಳಬಟ್ಟಿ ಗ್ರಾಮದ ಜೇವರ್ಗಿ ತಾಲೂಕಿನ ಕಲಬುರಗಿ ಜಿಲ್ಲೆಯ ಜಮೀನು ಸರ್ವೆ ನಂ.150 ಒಟ್ಟು ಕ್ಷೇತ್ರ 8 ಎಕರೆ 00 ಗುಂಟೆ ಇದರಲ್ಲಿ 4 ಎಕರೆ ಜಮೀನು ದಾವಾ ಆಸ್ತಿಯಾಗಿರುತ್ತದೆ.

ಇದರ ಚೆಕಬಂದಿ ಈ ಕೆಳಗಿನಂತಿರುತ್ತದೆ.

ಪೂರ್ವಕ್ಕೆ : ಸ ನಂ.150 ರ ಉಳಿದ ಜಮೀನು ಮತ್ತುಶರಣಪ್ಪ ಮುಕ್ಕಾಣಿ ಇವರ ಜಮೀನು

ಪಶ್ಚಿಮಕ್ಕೆ : ಬಳಬಟ್ಟಿ ಗ್ರಾಮದ ಸರಹದ್ದು

ಉತ್ತರಕ್ಕೆ : ವಾದಿಯ ಜಮೀನು

ದಕ್ಷಿಣಕ್ಕೆ : ಸನಂ. 150 ರ ಉಳಿದ ಜಮೀನು

**ಇನ್ನು ಮುಂದು ಸದರಿ ಸ್ವತ್ತನ್ನು ದಾವಾ ಸ್ವತ್ತು ಎಂದು ಕರೆಯಲಾಗುತ್ತದೆ.**

3. ವಾದಿಯು ಹೇಳುವುದೇನೆಂದರೆ, 1ನೇ ಪ್ರತಿವಾದಿಯು ಪ್ರತಿವಾದಿಯರ ಕುಟುಂಬದ ಕರ್ತನಾಗಿದ್ದು ಮತುತ ಪ್ರತಿವಾದಿಯರ ಅಜ್ಞಾನ ಸಂರಕ್ಷಣ ಪಾಲಕರಾಗಿದ್ದು, 1ನೇ ಪ್ರತಿವಾದಿಯು ತನ್ನ ಕುಟುಂಬದ ಅಡಚಣೆಗೋಸ್ಕರ ದಾವಾ ಆಸ್ತಿಯನ್ನು ದಿನಾಂಕ 14.09.2010 ರಂದು ನೊಂದಾಯಿತ ಕ್ರಯ ಪತ್ರದ ದಾಖಲಾತಿ ನಂ. 2449/2010-11 ಮೂಲಕ ಮಾರಾಟ ಮಾಡಿದ್ದು , ಸದರಿ ಮಾರಾಟ ದಿನದಿಂದ ವಾದಿಯು ದಾವಾ ಆಸ್ತಿಯ ಮಾಲೀಕರು ಮತ್ತು

ಸ್ವಾಧೀನದಾರರಾಗಿರುತ್ತಾರೆ. ಮುಂದುವರೆದು ಅದೇ ದಿವಸ ವಾದಿಯ ಸಹೋದಾರರಾದ ಮಲ್ಲಿಕಾರ್ಜುನ ತಂದೆ ಶರಣಪ್ಪ ಇವರಿಗೆ 02 ಎಕರೆ ಜಮೀನನ್ನು ನೊಂದಾಯಿತ ಕ್ರಯ ಪತ್ರ ದಾಖಲಾತಿ ನಂ. 2450/2010-11 ಮಾರಾಟ ಮಾಡಿರುತ್ತಾರೆ.

4. ವಾದಿಯು ಮುಂದುವರೆದು ಹೇಳುವುದೆನೆಂದರೆ, ದಾವಾ ಆಸ್ತಿಯಲ್ಲಿ ವಾದಿಯರ ಹಕ್ಕನ್ನು ಮುಳಗಿಸುವ ಉದ್ದೇಶದಿಂದ 1ನೇ ಪ್ರತಿವಾದಿಯು, ವಾದಿ ಮತ್ತು ವಾದಿಯ ಸಹೋದರರಾದ ಮಲ್ಲಿಕಾರ್ಜುನ ತಂದೆ ಶರಣಪ್ಪ ಇವರಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರಗಳನ್ನು ರದ್ದು ಕೋರಿ 1ನೇ ಪ್ರತಿವಾದಿಯ ಮಕ್ಕಳು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.21/2012 ನ್ನು ದಾಖಲು ಮಾಡಿರುತ್ತಾರೆ.

5. ವಾದಿಯು ಮುಂದುವರೆದು ಹೇಳುವುದೆನೆಂದರೆ, ಅಸಲು ದಾವಾ ನಂ.21/2012 ರಲ್ಲಿ ಪ್ರಸ್ತುತ ವಾದಿಯರಿಗೆ ಪ್ರತಿವಾದ ಪತ್ರವನ್ನು ತಿರಸ್ಕಾರ ಮಾಡಿರುವುದರಿಂದ, ವಾದಿಯರು ರಿಟ್ ಪಿಟಿಶನ ನಂ. 2000536/2016 ನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದಲ್ಲಿ ಸಲ್ಲಿಸಿರುತ್ತಾರೆ. ಸದರಿ ರಿಟ್ ಅರ್ಜಿಯು ವಜಾಗೊಂಡಿದ್ದು, ಸದರಿ ವಜಾ ಆದೇಶ ಪ್ರಶ್ನೆಯನ್ನು ಮಾನ್ಯ ಸರ್ವೋಚ ನ್ಯಾಯಾಲಯ ಸ್ಪೆಶಲ್ ಲೀವ ಪಿಟಿಶನ ನಂ.9721/2016 ರಂದು ಸಲ್ಲಿಸಿದ್ದು, ಸದರಿ ಮೇಲ್ಮನವಿಯು ದಿನಾಂಕ 06.05.2016 ರಂದು ವಜಾಗೊಂಡಿರುತ್ತದೆ. 3ನೇ ಪ್ರತಿವಾದಿಯ ವಿರುದ್ದ ಸದರಿ ಅಸಲು ದಾವಾ ನಂ.21/2012 ವಜಾಗೊಂಡಿರುತ್ತದೆ. ಅಸಲು ದಾವಾ ನಂ.21/2012ರಲ್ಲಿ ಪ್ರತಿವಾದಿಯರು ತಮ್ಮ ತಮ್ಮಲ್ಲಿ ಶಾಮಿಲಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಅಸಲು ದಾವಾ ನಂ.21/2012 ರಲ್ಲಿ ವಾದಿಯು ಪ್ರತಿವಾದ ಪತ್ರ ಸಲ್ಲಿಸದ ಕಾರಣ ತನ್ನ ಹಕ್ಕನ್ನು ರಕ್ಷಣೆ ಮಾಡುವ

KAKB620003692012

ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ಅಸಲು ದಾವಾ ನಂ. 21/2012 ರಲ್ಲಿ ವಾದಿಯು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಸದರಿ ವಿಷಯವನ್ನು ದುರುಪಯೋಗ ಮಾಡಿಕೊಂಡು ಪ್ರತಿವಾದಿಯರು ವಾದಿಯರ ಸ್ವಾಧೀನತೆಗೆ ತೊಂದರೆ ನೀಡುತ್ತಿರುತ್ತಾರೆ.

6. ವಾದಿಯು ಮುಂದುವರೆದು ಹೇಳುವುದೇನೆಂದರೆ, ಅಸಲು ದಾವಾ ನಂ 21/2012 ಚಾಲ್ತಿ ಹಂತದಲ್ಲಿ ಇದ್ದಾಗ 1ನೇ ಪ್ರತಿವಾದಿಯು ಕುಟುಂಬದ ಕರ್ತನಾಗಿ ಸ.ನಂ.150 ರಲ್ಲಿ ಯಾಸಿನಸಾಬ ತಂದೆ ಖಾಸಿಂಸಾಬ ಮತ್ತು ಉಸಮಾನಸಾಬ ತಂದೆ ಸುಕ್ರೂಮ ಚೌದರಿ ಇವರಿಗೆ ದಿನಾಂಕ 19.08.2014 ರಂದು ನೊಂದಾಯಿತ ಖರೀದಿ ಪತ್ರ ದಾಖಲಾತಿ ನಂ.2949/2014-15 ಮತ್ತು ದಿನಾಂಕ 13.04.2015 ರಂದು ನೊಂದಾಯಿತ ಖರೀದಿ ಪತ್ರ ದಾಖಲಾತಿ ನಂ.276/2015-16 ನ್ನು ಬರೆದುಕೊಟ್ಟಿರುತ್ತಾರೆ. ಸದರಿ ವಿಷಯವು ಪ್ರತಿವಾದಿನಂ.2 ರಿಂದ 6 ರ ಗಮನದಲ್ಲಿ ಇರುತ್ತದೆ. ಸದರಿ ವಿಷಯದಿಂದ ತಿಳಿದುಬರುವುದೇನೆಂದರೆ, ಪ್ರತಿವಾದಿಯರು ದುರುದ್ದೇಶದಿಂದ ವಾದಿಯರ ವಿರುದ್ದ ಅಸಲು ದಾವಾ ನಂ.21/2012 ನ್ನು ಸಲ್ಲಿಸಿರುತ್ತಾರೆ.

7. ವಾದಿಯು ಮುಂದುವರೆದು ಹೇಳುವುದೇನೆಂದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಸ್ಪೆಷಲ್ ಲೀವ ಪಿಟಪಿಶನ ಸಂಖ್ಯೆ 9721/2016 ರ ವಾದಿಯರ ಅರ್ಜಿಯು ವಜಾಗೊಂಡಿದ್ದರಿಂದ, 2016 ರ ಮೇ ತಿಂಗಳಲ್ಲಿ ವಾದಿಯರಿಗೆ ಈ ದಾವೆಯನ್ನು ದಾಖಲು ಮಾಡಲು ದಾವಾ ಕಾರಣವುಂಟಾಯಿತು.

8. **ಅಸಲು ದಾವಾ ನಂ.191/2016 ರಲ್ಲಿ 4 ಮತ್ತು 5ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸಿದ್ದು, ಪ್ರತಿವಾದಿ ನಂ.1, 2, 3**

KAKB620003692012

**ಮತ್ತು 6 ರವರು 4 ಮತ್ತು 5ನೇ ಪ್ರತಿವಾದಿಯರ ಪ್ರತಿವಾದ ಪತ್ರವನ್ನು ಅಳವಡಿಸಿಕೊಂಡಿರುತ್ತಾರೆ. ಸದರಿ ಪ್ರತಿವಾದ ಪತ್ರದ ಸಾಂರಾಂಶ ಈ ಕೆಳಗಿನಂತಿರುತ್ತದೆಃ**

ಪ್ರತಿವಾದಿಯರು ತಮ್ಮ ಸಂಬಂಧವನ್ನು ಒಪ್ಪಿ ಕೊಳ್ಳುತ್ತಾರೆ. ಆದರೆ ದಾವಾ ಆಸ್ತಿಯ ಚೆಕಬಂದಿ ತಪ್ಪಾಗಿರುತ್ತದೆಂದು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾರೆ. 1ನೇ ಪ್ರತಿವಾದಿಯು ಪ್ರತಿವಾದಿ ನಂ 2 ರಿಂದ 6 ರ ಅಜ್ಞಾನ ಸಂರಕ್ಷಣಾ ಪಾಲಕರಾಗಿದ್ದು, 1ನೇ ಪ್ರತಿವಾದಿಯು ದಿನಾಂಕ 14.09.2010 ರಂದು ದಾವಾ ಆಸ್ತಿಯನ್ನು ವಾದಿಯರಿಗೆ ಮಾರಾಟ ಮಾಡಿರುವ ಅಂಶವು ಸುಳ್ಳಾಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಸ.ನಂ.150/1 ಮತ್ತು ಸನಂ.150/2 ಸದರಿ ಜಮೀನುಗಳು ಪ್ರತಿವಾದಿ ನಂ.1 ರಿಂದ 6 ರ ಪೀತ್ರಾರ್ಜಿತ ಮತ್ತು ಜಂಟಿ ಕುಟುಂಬದ ಸ್ವತ್ತುಗಳಾಗಿರುತ್ತವೆ. 1ನೇ ಪ್ರತಿವಾದಿಯು ಒಬ್ಬ ಅನಕ್ಷರಸ್ಥ ಮತ್ತು ಹಳ್ಳಿಯಲ್ಲಿ ಬೆಳೆದ ಹೆಣ್ಣು ಮಗಳಾಗಿದ್ದು, 1ನೇ ಪ್ರತಿವಾದಿಗೆ ವ್ಯವಹಾರ ಜ್ಞಾನ ಇಲ್ಲದ ಕಾರಣ 2ನೇ ಪ್ರತಿವಾದಿಯೇ ಪ್ರತಿವಾದಿ ಕುಟುಂಬದ ಎಲ್ಲ ವ್ಯವಹಾರಗಳನ್ನು ಪ್ರತಿವಾದಿಯರ ಪರವಾಗಿ ನೋಡಿಕೊಳ್ಳುತ್ತಿರುತ್ತಾರೆ. ಪ್ರತಿವಾದಿಯರು ತಮ್ಮ ತಮಲ್ಲಿ ಶಾಮಿಲಾಗಿ ಇದೇ ನ್ಯಾಯಾಲಯದಲ್ಲಿ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ ಎಂಬ ವಿಷಯಗಳನ್ನು ನಿರಾಕರಿಸಿರುತ್ತಾರೆ. 3ನೇ ಪ್ರತಿವಾದಿಯ ವಿರುದ್ದ ಅಸಲು ದಾವಾ ನಂ.21/2012 ವಜಾಗೊಂಡಿರುತ್ತದೆ ಎಂಬ ಅಂಶವನ್ನು ಒಪ್ಪಿಕೊಂಡಿರುತ್ತಾರೆ. ಸದರಿ ವಾದಿಯ ತಮ್ಮನಾದ ಮಲ್ಲಿಕಾರ್ಜುನ ಇತನು ವಿರುದ್ದ 1ರಿಂದ 6ನೇ ಪ್ರತಿವಾದಿಯರು ಸಿ.ಸಿ. ನಂ.190/2013 ನ್ನು ದಾಖಲು ಮಾಡಿರುತ್ತಾರೆ.

9. ಪ್ರತಿವಾದಿಯರು ಮುಂದುವರೆದು ಹೇಳುವುದೇನೆಂದರೆ, ಸದರಿ

KAKB620003692012

ದಾವೆಯು ಕಾಲಪರಿಮಿತಿ ಅಧಿನಿಯಮದಿಂದ ಪ್ರತಿಷೇಧಿತವಾಗಿರುತ್ತದೆ. ಅಸಲು ದಾವಾ ನಂ.21/2012 ರಲ್ಲಿ ಪ್ರಸ್ತುತ ಪ್ರತಿವಾದಿಯರು ವಾದಿಯ ಮಾಲೀಕತ್ವವನ್ನು ನಿರಾಕರಣೆ ಮಾಡಿರುವುದರಿಂದ, ಸದರಿ ಅಸಲು ದಾವಾ ನಂ.21/2012 ರಲ್ಲಿ ಪ್ರಸ್ತುತ ವಾದಿಯರಿಗೆ ದಾವಾ ಸಮನ್ಸ ಜಾರಿ ಆದಾಗಿನಿಂದ ಕಾಲಪರಿಮಿತಿ ಆರಂಭಗೊಂಡಿದ್ದು, ಸದರಿ ದಾವೆಯು ಕಾಲಪರಿಮಿತಿ ಅಧಿನಿಯಮದಲ್ಲಿ ಉರ್ಜಿತವಾಗುವುದಿಲ್ಲ. ಸ.ನಂ.150/1 ಮತ್ತು ಸನಂ.150/2 ಸದರಿ ಆಸ್ತಿಗಳು ಬೇರೆ ಬೇರೆ ಆಗಿರುವುದರಿಂದ ದಾವಾಆಸ್ತಿಗಳ ಚೆಕಬಂದಿಯು ತಪ್ಪಾಗಿರುವ ಕಾರಣ ಪ್ರಸ್ತುತ ದಾವೆಯು ಉರ್ಜಿತವಾಗುವುದಿಲ್ಲ.

10. ಪ್ರತಿವಾದಿಯರು ಮುಂದುವರೆದು ಹೇಳುವುದೆನೆಂದರೆ, ದಾವಾ ಆಸ್ತಿಗಳು ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳಾಗಿರುವುದರಿಂದ 1ನೇ ಪ್ರತಿವಾದಿಗೆ ಸದರಿ ದಾವಾ ಆಸ್ತಿಯನ್ನು ಮಾರಾಟ ಮಾಡುವ ಅಧಿಕಾರ ಇರುವುದಿಲ್ಲ. ಸದರಿ ಮಾರಾಟ ಪತ್ರದಲ್ಲಿ ಪ್ರತಿಪಲ ಹಣವನ್ನು ಪ್ರತಿವಾದಿಯರಿಗೆ ನೀಡಿರುವುದಿಲ್ಲ ಮುಂದುವರೆದು ಸದರಿ ಮಾರಾಟ ಪತ್ರ ಬರೆದ ದಿನಾಂಕದಿಂದ ವಾದಿಯರಿಗೆ ದಾವಾ ಸ್ವತ್ತಿನ ಸ್ವಾದೀನತೆಯನ್ನು ನೀಡಿರುವುದಿಲ್ಲ ಆದ್ದರಿಂದ ಪ್ರಸ್ತುತ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

11. **<u>ಅಸಲು ದಾವಾ ನಂ.21/2012 ವಾದ ಪತ್ರ ಸಾರಾಂಶ ಈ ಕೆಳಗಿನಂತಿರುತ್ತದೆ.</u>**

ದಾವಾ ಆಸ್ತಿಯು ಬಳಬಟ್ಟಿ ಗ್ರಾಮದ ಜೇವರ್ಗಿ ತಾಲೂಕಿನ ಕಲಬುರಗಿ ಜಿಲ್ಲೆಯ ಜಮೀನು ಸರ್ವೆ ನಂ.150 ಒಟ್ಟು ಕ್ಷೇತ್ರ 8 ಎಕರೆ 00 ಗುಂಟೆ ಇದರಲ್ಲಿ 4 ಎಕರೆ ಜಮೀನು ದಾವಾ ಆಸ್ತಿಯಾಗಿರುತ್ತದೆ. ಇದರ ಚೆಕಬಂದಿ ಈ

KAKB620003692012

ಕೆಳಗಿನಂತಿರುತ್ತದೆ.

ಪೂರ್ವಕ್ಕೆ : ಮಹ್ಮದ ಯಾಸಿನ ಇವರಜಮೀನು

ಪಶ್ಚಿಮಕ್ಕೆ : ಸೋಮಣ್ಣಗೌಡ ಸೊನ್ನಳ್ಳಿ ಇವರ ಜಮೀನು

ಉತ್ತರಕ್ಕೆ : ಬಸವರಾಜ ತಂದೆ ಶರಣಪ್ಪ ಮುಕ್ರಿ ಇವರ ಜಮೀನು

ದಕ್ಷಿಣಕ್ಕೆ : ಬಸವರಾಜ ತಂದೆ ಸಿದ್ದಪ್ಪ ಹಾಳವೆ ಇವರ ಜಮೀನು

12. ದಾವಾ ಆಸ್ತಿಯು ಬಳಬಟ್ಟಿ ಗ್ರಾಮದ ಜೇವರ್ಗಿ ತಾಲೂಕಿನ ಕಲಬುರಗಿ ಜಿಲ್ಲೆಯ ಜಮೀನು ಸರ್ವೆ ನಂ.150/2 ಒಟ್ಟು ಕ್ಷೇತ್ರ 2 ಎಕರೆ 00 ಗುಂಟೆ ಜಮೀನು. ಇದರ ಚೆಕಬಂದಿ ಈ ಕೆಳಗಿನಂತಿರುತ್ತದೆ.

ಪೂರ್ವಕ್ಕೆ : ಮಹ್ಮದ ಯಾಸಿನ ಇವರ ಜಮೀನು

ಪಶ್ಚಿಮಕ್ಕೆ : ಸೋಮಣ್ಣಗೌಡ ಸೊನ್ನಳ್ಳಿ ಇವರ ಜಮೀನು

ಉತ್ತರಕ್ಕೆ : ಬಸವರಾಜ ತಂದೆ ಶರಣಪ್ಪ ಮುಕ್ರಿ ಇವರ ಜಮೀನು

ದಕ್ಷಿಣಕ್ಕೆ : ಬಸವರಾಜ ತಂದೆ ಸಿದ್ದಪ್ಪ ಹಾಳವೆ ಇವರ ಜಮೀನು

**ಇನ್ನು ಮುಂದು ಸದರಿ ಸ್ವತ್ತುಗಳನ್ನು ದಾವಾ ಸ್ವತ್ತುಗಳೆಂದು ಕರೆಯಲಾಗುವುದು.**

13. ವಾದಿಯರು ಹೇಳುವುದೆನೆಂದರೆ ವಾದಿಯರ ತಂದೆಯಾದ ಬಸವರಾಜ ದಾನಾ ಇವರು ದಿನಾಂಕ 10.09.2008 ರಂದು ಮೃತರಾಗಿರುತ್ತಾರೆ. ಸದರಿ ಬಸವರಾಜ ದಾನಾ ಇವರಿಗೆ ವಾದಿಯರು ಮತ್ತು 1ನೇ ಪ್ರತಿವಾದಿಯು ಸರಳ ವಾರಸುದಾರರಾಗಿರುತ್ತಾರೆ. ಪ್ರತಿವಾದಿ ನಂ.2 ರಿಂದ 4 ರವರು ವಾದಿಯರ ಕುಟುಂಬಕ್ಕೆ ಮತ್ತು ದಾವಾ ಆಸ್ತಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ.

14. ವಾದಿಯರು ಹೇಳುವುದೆನೆಂದರೆ, 1ನೇ ವಾದಿಯು, ವಾದಿಯರ

ಹಿರಿಯ ಸಹೋದರಿಯಾಗಿದ್ದು, 4 ಮತ್ತು 5ನೇ ವಾದಿಯರು ಅಲ್ಪ ವಯಸ್ಕರಾಗಿರುವುದರಿಂದ 1ನೇ ವಾದಿಯು, 4 ಮತ್ತು 5ನೇ ಪ್ರತಿವಾದಿಯು ಆಜ್ಞಾನ ಸಂರಕ್ಷಣ ಪಾಲಕರಾಗಿರುತ್ತಾರೆ. 1ನೇ ವಾದಿಗೆ ಉಳಿದ ಪ್ರತಿವಾದಿಯರ ವಿರುದ್ದ ಯಾವುದೇ ಪ್ರತಿಕೂಲ ಹಿತಾಸಕ್ತಿ ಇರುವುದಿಲ್ಲ. ದಾವಾ ಆಸ್ತಿ ಸ.ನಂ.150/1 ಮತ್ತು 150/2 ವಾದಿಯರು ಮತ್ತು 1ನೇ ಪ್ರತಿವಾದಿಯ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಸ್ವತ್ತುಗಳಾಗಿರುತ್ತವೆ. 1ನೇ ಪ್ರತಿವಾದಿಯು ಒಬ್ಬ ಅನಕ್ಷರಸ್ಥ ಮತ್ತು ಹಳ್ಳಿಯ ಹೆಣ್ಣು ಮಗಳಾಗಿದ್ದು, ಅವರಿಗೆ ಯಾವುದೇ ವ್ಯವಹಾರ ಜ್ಞಾನ ಇಲ್ಲದ ಕಾರಣ 1ನೇ ವಾದಿಯು ವಾದಿಯರ ಕುಟುಂಬದ ಎಲ್ಲ ವ್ಯವಹಾರವನ್ನು ನೋಡಿಕೊಳ್ಳುತ್ತಿರುತ್ತಾರೆ.

15. ವಾದಿಯರು ಮುಂದುವರೆದು ಹೇಳುವುದೆನೆಂದರೆ, ವಾದಿಯರ ತಂದೆಯಾದ ಬಸವರಾಜ ದಾನಾ ಇವರು ತಮ್ಮ ಕುಟುಂಬದ ಸ್ವತ್ತುಗಳ ಅಭೀವೃದ್ದಿಗೋಸ್ಕರ ಸನ್ 2006-07ನೇ ಇಸವಿಯಲ್ಲಿ ಸಾಲವನ್ನು ಪಡೆದುಕೊಂಡಿರುತ್ತಾರೆ. ಸದರಿ ಸಾಲಕ್ಕೆ 1ನೇ ಪ್ರತಿವಾದಿಗೆ ಯಾವುದೇ ಸಂಬಂಧ ಇರುವುದಿಲ್ಲ.

16. ವಾದಿಯರು ಮುಂದುವರೆದು ಹೇಳುವುದೆನೆಂದರೆ, ವಾದಿಯರ ತಂದೆಯಾದ ಬಸವರಾಜ ಇತನು ಸನ್ 2002-03 ರಲ್ಲಿ ಸನಂ.150/2 ರಲ್ಲಿ 4 ಎಕರೆ ಜಮೀನನ್ನು ತಮ್ಮ ಕುಟುಂಬದ ಅಡಚಣೆಗೋಸ್ಕರ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟದ ನಂತರ ವಾದಿಯರ ಕುಟುಂಬಕ್ಕೆ ಯಾವುದೇ ಹಣದ ತೊಂದರೆ ಇರುವುದಿಲ್ಲ. ದಾವಾ ಸ್ವತ್ತುಗಳು ವಾದಿಯರ ಮತ್ತು 1ನೇ ಪ್ರತಿವಾದಿ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ವಾದಿಯರು ಮತ್ತು 1ನೇ ಪ್ರತಿವಾದಿಯು ಸದರಿ ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನತೆಯನ್ನು ಹೊಂದಿರುತ್ತಾರೆ. ದಾವಾ ಆಸ್ತಿಗಳು ವಾದಿಯರು ಮತ್ತು

KAKB620003692012

1ನೇ ಪ್ರತಿವಾದಿಯ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ವಾದಿಯರಿಗಾಗಲೀ ಅಥವಾ 1ನೇ ಪ್ರತಿವಾದಿಗೆಯಾಗಲೀ ಮಾರಾಟ ಮಾಡುವ ಹಕ್ಕು ಇರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರು ಮತ್ತು 1ನೇ ಪ್ರತಿವಾದಿಯ ನಡುವೆ ಯಾವುದೇ ಕಾನೂನು ಬದ್ದಪಾಲು ಆಗಿರುವುದಿಲ್ಲ. 1ನೇ ಪ್ರತಿವಾದಿಯು, ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಶಾಮಿಲಾಗಿ ದಾವಾ ಆಸ್ತಿಯ ಫಹಣಿ ಪತ್ರಿಕೆಗಳಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿರುತ್ತಾರೆ. ಸದರಿ ಫಹಣಿ ಪತ್ರಿಕೆ ಹೆಸರು ದಾಖಲಾದ ಕಾರಣ 1ನೇ ಪ್ರತಿವಾದಿಗೆ ಯಾವುದೇ ಮಾಲೀಕತ್ವ ಉಂಟಾಗುವುದಿಲ್ಲ.

17. ವಾದಿಯರು ಮುಂದುವರೆದು ಹೇಳುವುದೇನೆಂದರೆ, 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಸನಂ 150/1 ನ್ನು 4 ಎಕರೆ ಜಮೀನನ್ನು ಪ್ರತಿಫಲ ಹಣ ರೂ. 1,60,000/- ಗಳಿಗೆ ಮಾರಾಟ ಮಾಡಿರುತ್ತಾರೆ. ಆದರೆ ಸದರಿ ಜಮೀನಿಗೆ ಪ್ರತಿ ಎಕರೆಗೆ ಅಂದಾಜು 2 ಲಕ್ಷ ರೂಪಾಯಿ ಬೆಲೆ ಇರುತ್ತದೆ. ಪ್ರತಿವಾದಿ ನಂ.2 ರವರು ಸದರಿ ಮಾರಾಟ ಪತ್ರದ ಹಣವನ್ನು ವಾದಿಯರಿಗೆ ನೀಡಿರುವುದಿಲ್ಲ ಮತ್ತು ಸದರಿ ಮಾರಾಟ ಪತ್ರವಾದ ನಂತರ ದಾವಾಸ್ವತ್ತಿನ ಸ್ವಾಧೀನತೆಯನ್ನು 2ನೇ ಪ್ರತಿವಾದಿಗೆ ನೀಡಿರುವುದಿಲ್ಲ. ಆದ್ದರಿಂದ 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ದಿನಾಂಕ 14.09.2010 ರಂದು ಬರೆದುಕೊಟ್ಟ ನೊಂದಾಯತ ಕ್ರಯಪತ್ರವು ದಾಖಲಾತಿ ನಂ.2449/2010-11 ಶೂನ್ಯವಾಗಿದ್ದು, ಸದರಿ ಕ್ರಯಪತ್ರಕ್ಕೆ ಕಾನೂನಿನ ಅಡಿಯಲ್ಲಿ ಯಾವುದೇ ಮೌಲ್ಯ ಇರುವುದಿಲ್ಲ.

18. ವಾದಿಯರು ಮುಂದುವರೆದು ಹೇಳುವುದೇನೆಂದರೆ, 1ನೇ ಪ್ರತಿವಾದಿಯು 3ನೇ ಪ್ರತಿವಾದಿಗೆ ಸ.ನಂ 150/2 ನ್ನು 2 ಎಕರೆ ಜಮೀನನ್ನು ಪ್ರತಿಫಲ ಹಣ ರೂ. 80,000/- ಗಳಿಗೆ ಮಾರಾಟ ಮಾಡಿರುತ್ತಾರೆ. 1ನೇ

KAKB620003692012

ಪ್ರತಿವಾದಿಗೆ 3ನೇ ಪ್ರತಿವಾದಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಕಾನೂನುಬದ್ದ ಹಕ್ಕು ಇರುವುದಿಲ್ಲ. ಪ್ರತಿವಾದಿ ನಂ.3 ರವರು ಸದರಿ ಮಾರಾಟ ಪತ್ರದ ಹಣವನ್ನು ವಾದಿಯರಿಗೆ ನೀಡಿರುವುದಿಲ್ಲ ಮತ್ತು ಸದರಿ ಮಾರಾಟ ಪತ್ರವಾದ ನಂತರ ದಾವಾ ಸ್ವತ್ತಿನ ಸ್ವಾಧೀನತೆಯನ್ನು 3ನೇ ಪ್ರತಿವಾದಿಗೆ ನೀಡಿರುವುದಿಲ್ಲ. ಆದ್ದರಿಂದ 1ನೇ ಪ್ರತಿವಾದಿಯು 3ನೇ ಪ್ರತಿವಾದಿಗೆ ದಿನಾಂಕ 14.09.2010 ರಂದು ಬರೆದುಕೊಟ್ಟ ನೊಂದಾಯಿತ ಕ್ರಯಪತ್ರವು ದಾಖಲಾತಿ ನಂ.2450/2010-11 ಶೂನ್ಯವಾಗಿದ್ದು, ಸದರಿ ಕ್ರಯಪತ್ರಕ್ಕೆ ಕಾನೂನಿನಡಿಯಲ್ಲಿ ಯಾವುದೇ ಮೌಲ್ಯ ಇರುವುದಿಲ್ಲ.

19. ವಾದಿಯು ಮುಂದುವರೆದು ಹೇಳುವುದೇನೆಂದರೆ, ಪ್ರತಿವಾದಿಯರು ಸದರಿ ಕ್ರಯಪತ್ರದ ಆಧಾರದ ಮೇಲೆ ವಾದಿಯರ ದಾವಾ ಸ್ವತ್ತಿನ ಸ್ವಾಧೀನತೆಗೆ ತೊಂದರೆ ನೀಡಿದ್ದರಿಂದ ಸದರಿ ದಾವೆಯನ್ನು ವಾದಿಯರ ವಿರುದ್ದ ದಾವಾ ಆಸ್ತಿಗಳನ್ನು ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಸ್ವತ್ತುಗಳೆಂದು ಘೋಷಣೆ ಮಾಡಲು ಮತ್ತು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ದಿನಾಂಕ 14.09.2010 ರಂದು ಬರೆದುಕೊಟ್ಟ ನೊಂದಾಯಿತ ಮಾರಾಟ ಪತ್ರ ದಾಖಲಾತಿ ಸಂ.2449/2010-11 ಮತ್ತು 1ನೇ ಪ್ರತಿವಾದಿಯು 3ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರ ಸಂ.2450/2010-11 ನ್ನು ಶೂನ್ಯವೆಂದು ಘೋಷಣೆ ಮಾಡಲು ಮತ್ತು ಪ್ರತಿವಾದಿಯರ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ.

20. ಅಸಲು ದಾವಾ ನಂ.21/2012 ರಲ್ಲಿ 1ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. 1ನೇ ಪ್ರತಿವಾದಿಯು ಅಸಲು ದಾವಾ ನಂ.21/2012 ರಲ್ಲಿ ವಾದಿಯರ ವಾದ ಪತ್ರದ ಎಲ್ಲಾ ಅಂಶಗಳನ್ನು ಒಪ್ಪಿಕೊಂಡಿರುತ್ತಾರೆ.

21. **<u>ಅಸಲು ದಾವಾ ನಂ.21/2012 2ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ 2ನೇ ಪ್ರತಿವಾದಿಯರ ಪ್ರತಿವಾದ ಪತ್ರವನ್ನು ಈ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ 2 ರ ಆದೇಶದ ಮೇಲೆ 2ನೇ ಪ್ರತಿವಾದಿಯರ ಪ್ರತಿವಾದ ಪತ್ರವನ್ನು ತಿರಸ್ಕಾರ ಮಾಡಿರುತ್ತಾರೆ.</u>**

22. **<u>ಅಸಲು ದಾವಾ ನಂ.21/2012 ರಲ್ಲಿ 3ನೇ ಪ್ರತಿವಾದಿಯ ಪ್ರತಿವಾದ ಪತ್ರ ಈ ಕೆಳಗಿನಂತಿರುತ್ತದೆ.</u>**

3ನೇ ಪ್ರತಿವಾದಿಯು ವಾದಿಯರ ವಾದ ಪತ್ರದ ಪ್ರತಿಯೊಂದು ಅಂಶವನ್ನು ನಿರ್ಧೀಷ್ಟವಾಗಿ ನಿರಾಕರಿಸಿರುತ್ತಾರೆ.

23. 1ನೇ ವಾದಿಯು 2 ರಿಂದ 5ನೇ ವಾದಿಯರ ಅಜ್ಞಾನ ಸಂರಕ್ಷಣ ಪಾಲಕರು ಇರುತ್ತಾರೆಂಬ ಅಂಶವನ್ನು 2ನೇ ಪ್ರತಿವಾದಿಯು ನಿರಾಕರಿಸಿರುತ್ತಾರೆ. 1ನೇ ಪ್ರತಿವಾದಿಯು ವಾದಿಯರ ಕುಟುಂಬದ ಕರ್ತನಾಗಿದ್ದು, 1ನೇ ಪ್ರತಿವಾದಿಯು 4 ಮತ್ತು 5ನೇ ವಾದಿ ಆಜ್ಞಾನ ಸಂರಕ್ಷಣ ಪಾಲಕರಾಗಿರುತ್ತಾರೆ. 1ನೇ ಪ್ರತಿವಾದಿಯು ಒಬ್ಬ ಅನಕ್ಷರಸ್ಥ ಮತ್ತು ಹಳ್ಳಿಯ ಹೆಣ್ಣು ಮಗಳಾಗಿದ್ದು, ಅವರಿಗೆ ಯಾವುದೇ ವ್ಯವಹಾರ ಜ್ಞಾನ ಇಲ್ಲದ ಕಾರಣ 1ನೇ ವಾದಿಯು ವಾದಿಯರ ಕುಟುಂಬದ ಎಲ್ಲ ವ್ಯವಹಾರವನ್ನು ನೋಡಿಕೊಳ್ಳುತ್ತಿರುತ್ತಾರೆ ಎಂಬ ವಿಷಯವನ್ನು 3ನೇ ಪ್ರತಿವಾದಿಯು ನಿರಾಕರಿಸಿರುತ್ತಾರೆ.

24. 3ನೇ ಪ್ರತಿವಾದಿಯು ಹೇಳುವುದೇನೆಂದರೆ, 1ನೇ ಪ್ರತಿವಾದಿ ಮತ್ತು ವಾದಿಯರು ತಮ್ಮ ತಮ್ಮಲ್ಲಿ ಶಾಮಿಲಾಗಿ 2 ಮತ್ತು 3ನೇ ಪ್ರತಿವಾದಿಯರ

ಆಸ್ತಿಯನ್ನು ಕಬಳಿಸುವ ಮತ್ತು ಹಾನಿ ಮಾಡುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. 1ನೇ ಪ್ರತಿವಾದಿಯು ತನ್ನ ಕುಟುಂಬದ ಅಡಚಣೆಗೋಸ್ಕರ 2 ಮತ್ತು 3ನೇ ಪ್ರತಿವಾದಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ. 2 ಮತ್ತು 3ನೇ ಪ್ರತಿವಾದಿಯು ದಾವಾ ಆಸ್ತಿಗಳ ಪ್ರಾಮಾಣೀಕ ಖರೀದಿದಾರರಾಗಿರುತ್ತಾರೆ. 1ನೇ ಪ್ರತಿವಾದಿಯು ಸ.ನಂ.150 ರಲ್ಲಿ 04 ಎಕರೆ ಜಮೀನನ್ನು ದಿನಾಂಕ 14.09.2010 ರಂದು ನೊಂದಾಯಿತ ಕ್ರಯಪತ್ರ ದಾಖಲಾತಿ ನಂ 2449/2010-11 ನ್ನು ಮತ್ತು 3ನೇ ಪ್ರತಿವಾದಿಗೆ ಸನಂ 150 ರಲ್ಲಿ 02 ಎಕರೆ ಜಮೀನನ್ನು ನೊಂದಾಯಿತ ಕ್ರಯ ಪತ್ರ ದಾಖಲಾತಿ ನಂ.2450/2010-11 ರಂದು 1ನೇ ಪ್ರತಿವಾದಿಯು ವಾದಿಯ ಕುಟುಂಬದ ಕರ್ತನಾಗಿ ಮತ್ತು ವಾದಿಯರ ಕುಟುಂಬದ ಆಜ್ಞಾನ ಸಂರಕ್ಷಣ ಪಾಲಕರಾಗಿ, ಎಲ್ಲ ಪ್ರತಿಫಲ ಹಣವನ್ನು ಸ್ವೀಕಾರ ಮಾಡಿ ಮಾರಾಟ ಮಾಡಿರುತ್ತಾರೆ. ಮಾರಾಟವಾದ ದಿನದಂದು 2 ಮತ್ತು 3ನೇ ಪ್ರತಿವಾದಿಯರು ತಮ್ಮ ಮಾರಾಟ ಪತ್ರದ ಪ್ರಕಾರ ದಾವಾ ಸ್ವತ್ತುಗಳ ಸ್ವಾಧೀನತೆಯನ್ನು ಹೊಂದಿರುತ್ತಾರೆ.

25. 3ನೇ ಪ್ರತಿವಾದಿಯು ಮುಂದುವರೆದು ಹೇಳುವುದೇನೆಂದರೆ, ದಾವಾ ಸ್ವತ್ತುಗಳು ವಾದಿಯರ ಮತ್ತು 1ನೇ ಪ್ರತಿವಾದಿ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ವಾದಿಯರು ಮತ್ತು 1ನೇ ಪ್ರತಿವಾದಿಯು ಸದರಿ ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂಬ ವಿಷಯವನ್ನು ನಿರಾಕರಿಸಿರುತ್ತಾರೆ. ದಾವಾ ಆಸ್ತಿಗಳು ವಾದಿಯರು ಮತ್ತು 1ನೇ ಪ್ರತಿವಾದಿಯ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ವಾದಿಯರಿಗಾಗಲೀ ಅಥವಾ 1ನೇ ಪ್ರತಿವಾದಿಗೆಯಾಗಲೀ ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಎಂಬ ವಿಷಯವನ್ನು ನಿರಾಕರಿಸಿರುತ್ತಾರೆ.

KAKB620003692012

ದಾವಾ ಆಸ್ತಿಗಳಲ್ಲಿ ವಾದಿಯರು ಮತ್ತು 1ನೇ ಪ್ರತಿವಾದಿಯ ನಡುವೆ ಯಾವುದೇ ಕಾನೂನುಬದ್ದ ಪಾಲು ಆಗಿರುವುದಿಲ್ಲ ಎಂಬ ವಿಷಯವನ್ನು ನಿರಾಕರಿಸಿರುತ್ತಾರೆ. 1ನೇ ಪ್ರತಿವಾದಿಯು, ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಶಾಮಿಲಾಗಿ ದಾವಾ ಆಸ್ತಿಯ ಫಹಣಿ ಪತ್ರಿಕೆಗಳಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂಬ ವಿಷಯವನ್ನು ನಿರಾಕರಿಸಿರುತ್ತಾರೆ. ಸದರಿ ಫಹಣಿ ಪತ್ರಿಕೆ ಹೆಸರು ದಾಖಲಾದ ಕಾರಣ 1ನೇ ಪ್ರತಿವಾದಿಗೆ ಯಾವುದೇ ಮಾಲೀಕತ್ವ ಉಂಟಾಗುವುದಿಲ್ಲ ಎಂಬ ವಿಷಯವನ್ನು ನಿರಾಕರಿಸಿರುತ್ತಾರೆ.

26. 3ನೇ ಪ್ರತಿವವಾದಿಯರು ಮುಂದುವರೆದು ಹೇಳುವುದೆನೆಂದರೆ, ಸದರಿ ದಾವಾ ಸ್ವತ್ತುಗಳಿಗೆ, ಪ್ರತಿ ಎಕರೆಗೆ ಅಂದಾಜು 2 ಲಕ್ಷ ರೂಪಾಯಿ ಬೆಲೆ ಇರುತ್ತದೆ. ಆದರೆ 2ನೇ ಪ್ರತಿವಾದಿಯು ರೂ 1,60,000/- ಗಳಿಗೆ ಮತ್ತು 3ನೇ ಪ್ರತಿವಾದಿಯು ರೂ 80,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂಬ ವಿಷಯವನ್ನು ನಿರಾಕರಿಸಿರುತ್ತಾರೆ. 2 ಮತ್ತು 3ನೇ ಪ್ರತಿವಾದಿರವರು ಸದರಿ ಮಾರಾಟ ಪತ್ರದ ಹಣವನ್ನು ವಾದಿಯರಿಗೆ ನೀಡಿರುವುದಿಲ್ಲ ಮತ್ತು ಸದರಿ ಮಾರಾಟ ಪತ್ರವಾದ ನಂತರ ದಾವಾ ಸ್ವತ್ತಿನ ಸ್ವಾಧೀನತೆಯನ್ನು 2ನೇ ಪ್ರತಿವಾದಿಗೆ ನೀಡಿರುವುದಿಲ್ಲ ಎಂಬ ವಿಷಯವನ್ನು ನಿರಾಕರಿಸಿರುತ್ತಾರೆ. ಆದ್ದರಿಂದ 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ದಿನಾಂಕ 14.09.2010 ರಂದು ಬರೆದುಕೊಟ್ಟ ನೊಂದಾಯತ ಕ್ರಯಪತ್ರವು ದಾಖಲಾತಿ ನಂ.2449/2010-11 ಮತ್ತು ಕ್ರಯಪತ್ರವು ದಾಖಲಾತಿ ನಂ.2450/2010-11 ಶೂನ್ಯವಾಗಿದ್ದು, ಸದರಿ ಕ್ರಯಪತ್ರಕ್ಕೆ ಕಾನೂನಿನಡಿಯಲ್ಲಿ ಯಾವುದೇ ಮೌಲ್ಯ ಇರುವುದಿಲ್ಲಎಂಬ ಅಂಶವನ್ನು ನಿರಾಕರಿಸಿರುತ್ತಾರೆ.

27. 3ನೇ ಪ್ರತಿವಾದಿಯು ಮುಂದುವರೆದು ಹೇಳುವುದೆನೆಂದರೆ,

ವಾದಿಯರು ಪ್ರಸ್ತುತ ದಾವೆಯನ್ನು ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ್ದು, ವಾದಿಯರು ಪಾಲು ವಾಟ್ನಿ ಮತ್ತು ಪ್ರತ್ಯೇಕ ಸ್ವಾ ಧೀನತೆ ಪರಿಹಾರ ಕೊಡದ ಪ್ರಸ್ತುತ ದಾವೆಯು ಉರ್ಜಿತವಾಗುವುದಿಲ್ಲ. 2 ಮತ್ತು 3ನೇ ಪ್ರತಿವಾದಿಯರು ದಾವಾ ಸ್ವತ್ತುಗಳ ಪ್ರಾಮಾಣೀಕ ಖರೀದಿದಾರರಾಗಿರುತ್ತಾರೆ. 1ನೇ ಪ್ರತಿವಾದಿಯು ವಾದಿಯರ ಕುಟುಂಬದ ಕರ್ತನಾಗಿದ್ದು, ವಾದಿಯರ ಕುಟುಂಬದ ಅಡಚಣೆಗೋಸ್ಕರ 1ನೇ ಪ್ರತಿವಾದಿಯು 3ನೇ ಪ್ರತಿವಾದಿಗೆ ಸನಂ 150 ರಲ್ಲಿ 4 ಎಕರೆ ಜಮೀನನ್ನು ದಿನಾಂಕ 14.09.2010 ರಂದು ನೊಂದಾಯಿತ ಕ್ರಯ ಪತ್ರ ದಾಖಲಾತಿ ನಂ.2449/2010-11 ಮತ್ತು 3ನೇ ಪ್ರತಿವಾದಿಗೆ ನೊಂದಾಯಿತ ಕ್ರಯಪತ್ರ ದಾಖಲಾತಿ ನಂ.2450/2010-11 ಎಲ್ಲಾ ಪ್ರತಿಫಲ ಹಣವನ್ನು ಪಡೆದುಕೊಂಡು ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟ ದಿನದಿಂದ 2 ಮತ್ತು 3ನೇ ಪ್ರತಿವಾದಿಯರು ದಾವಾ ಸ್ವತ್ತೀನ ಸ್ವಾಧೀನತೆಯನ್ನು ಹೊಂದಿರುತ್ತಾರೆ ಆದ್ದರಿಂದ ಪ್ರಸ್ತುತ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

28. ಉಭಯ ಪಕ್ಷಗಾರರ ಪರ ವಾದ-ಪತ್ರ, ಪ್ರತಿವಾದ ಪತ್ರಗಳನ್ನು ಹಾಗೂ ದಾಖಲೆಗಳನ್ನು ಪರಿಗಣಿಸಿ, ಈ ಮುಂಚೆ ಇರುವ ನ್ಯಾಯಾಂಗ ಅಧಿಕಾರಿಯವರು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ.

**ISSUES IN OS No. 191/2016**

1. Whether the plaintiff proves that the she is absolute owner and she is in lawful possession over the suit property as per registered sale deed bearing document No.2449/2010-11 dated 14.09.2010

executed by the defendant No.1 in favour of plaintiff?

2. Whether plaintiff proves that defendant No.1 has executed the registered sale deed for her legal and family necessity with the knowledge other defendants?
3. Whether the plaintiff proves that alleged interference by the defendants as contended in the plaint?
4. Whether the defendant No.4 and 5 prove that suit properties are the ancestral joint family property of defendant No.1 to 6 and defendant No.1 has not salable right?
5. Whether plaintiff is entitled to the relief as sought for in the plaint?
6. What Order or Decree ?

**ISSUES IN OS No. 21/2012**

1. Whether plaintiffs prove that suit properties are joint family properties?
2. Whether the plaintiffs further prove that the sale deeds bearing document No. 2449/2010-11 document No. 2450/2010-11 are null and void and not binding on the plaintiffs?
3. Whether the plaintiffs prove that they are

in possession of the suit properties?

4. Whether the plaintiffs prove that defendants are trying to interference into the possession of the suit properties?
5. What Order or Decree ?

**ADDITIONAL ISSUES IN OS No. 191/2016**

1. Whether the defendant No.2 and 3 proves that, defendant No.1 is sale the suit schedule properties for her legal family necessity?
2. Whether the defendant No.2 and 3 proves that, they are the bonafide purchaser of the suit schedule properties?
3. Whether defendant No.2 and 3 proves that, suit is not maintainable as circumstance contained in their written statement?

29. ವಾದಿಯು ತಮ್ಮ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೊಳಗೆ ಪಡಿಸಿಕೊಂಡಿರುತ್ತಾರೆ ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ಪಿ.ಡಬ್ಲೂ-1 ರವರು ನಿಪಿ-1 ರಿಂದ ನಿಪಿ-25 ದಾಖಲೆಗಳನ್ನು ಗುರುತಿಸಿರುತ್ತಾರೆ.

30. ಪ್ರತಿವಾದಿಯರು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ ಪ್ರತಿವಾದಿ ನಂ.1 ತನ್ನನ್ನು ತಾನು ಡಿ.ಡಬ್ಲೂ-1

ಎಂದು ವಿಚಾರಣೆಗೆ ಒಳಪಡಿಸಿರುತ್ತಾನೆ. ತನ್ನ ಮೌಖಿಕ ಸಾಕ್ಷಿಯ ಸಮರ್ಥನೆಗಾಗಿ ನಿಡಿ-1 ರಿಂದ ನಿಡಿ-16 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

31. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ಪ್ರತಿವಾದಿಯರ ಪರ ವಕೀಲಾರದ ಶ್ರೀ ಕೆ ಎನ್ ಟಿ ವಕೀಲರು, ಲಿಖೀತ ವಾದವನ್ನು ಸಲ್ಲಿಸಿರುತ್ತಾರೆ. ತಮ್ಮ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಹಾಜರಪಡಿಸಿರುತ್ತಾರೆ.

1) ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕದ ತೀರ್ಪು RSA No.372/2003 K.C. Laxman S/o Chinnegowda V/S. K.C.Chandrappagowda.

2) ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು Civil Appeal No.2582/2010 K.C. Laxman S/o Chinnegowda V/S. K.C.Chandrappagowda.

3) ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕದ ತೀರ್ಪು RSA No.1247/2023 Sri. Papanna A. S/o late Annayya V/S. Smt. B.N.Siddeshwari W/o Shishankaraiah.

ಈ ಮೇಲಿನ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿಗೆ ಗೌರವಿಸುತ್ತಾ ಸದರಿ ತೀರ್ಪುಗಳು ಪ್ರಸ್ತುತ ದಾವೆಯ ವಿಷಯ ವಸ್ತುಗಳಿಗೆ ಅನ್ವಯವಾಗುವುದಿಲ್ಲ.

32. ಉಭಯ ಪಕ್ಷಗಾರರು ನೀಡಿದ ಸಾಕ್ಷ್ಯವನ್ನು ಮತ್ತು ಅವರ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿದ ನಂತರ, ಈ ನ್ಯಾಯಾಲಯವು

KAKB620003692012

ಮೇಲ್ಕಂಡ ವಿವಾದಾಂಶಗಳಿಗೆ ಈ ಕೆಳಕಂಡತೆ ಉತ್ತರಿಸುತ್ತದೆ.

**ಅಸಲು ದಾವಾ ನಂ191/2016 ರ ವಿವಾದಾಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.**

ವಿವಾದಾಂಶ ಸಂಖ್ಯೆ 1:- ಸಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 2:- ಸಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 3:- ಸಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 4:- ನಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 5:- ಸಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 6:- ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ

**ಅಸಲು ದಾವಾ ನಂ.21/2012 ರ ವಿವಾದಾಂಶಗಳು ಈ ಕೆಳಗಿನಂತೆ ಉತ್ತರಿಸಲಾಗಿದೆ.**

ವಿವಾದಾಂಶ ಸಂಖ್ಯೆ 1:- ಸಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 2:- ನಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 3:- ನಕಾರಾತ್ಮಕವಾಗಿ.
ವಿವಾದಾಂಶ ಸಂಖ್ಯೆ 4:- ನಕಾರಾತ್ಮಕವಾಗಿ.

ಹೆಚ್ಚುವರಿ ವಿವಾದಾಂಶ ಸಂಖ್ಯೆ 1:- ಸಕಾರಾತ್ಮಕವಾಗಿ.
ಹೆಚ್ಚುವರಿ ವಿವಾದಾಂಶ ಸಂಖ್ಯೆ 2:- ಸಕಾರಾತ್ಮಕವಾಗಿ.
ಹೆಚ್ಚುವರಿ ವಿವಾದಾಂಶ ಸಂಖ್ಯೆ 3:- ನಕಾರಾತ್ಮಕವಾಗಿ.

**ವಿವಾದಾಂಶ ಸಂಖ್ಯೆ 5:- ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ**

## ಕಾ ರ ಣ ಗ ಳು

33. **ಅಸಲು ದಾವಾನಂ.191/2016 ರ ವಿವಾದಾಂಶ ಸಂಖ್ಯೆ.1 ರಿಂದ 4 ಮತ್ತು ಅಸಲು ದಾವಾ ನಂ.21/2012 ರ ವಿವಾದಾಂಶ ನಂ.1 ರಿಂದ 4 ಮತ್ತು ಹೆಚ್ಚುವರಿ ವಿವಾದಾಂಶ ನಂ.1 ರಿಂದ3 ಇವುಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿದೆ.**

KAKB620003692012

ಪ್ರಸ್ತುತ ಅಸಲು ದಾವಾ ನಂ. 191/2016 ರ ವಾದಿಯು ಪ್ರತಿವಾದಿಯರ ವಿರುದ್ದ ಹಕ್ಕು ಘೋಷಣೆಮತ್ತು ಶಾಶ್ವತ ನಿರ್ಭಂಧಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಅಸಲು ದಾವಾ ನಂ.21/2012 ರ ವಾದಿಯರು ಪ್ರತಿವಾದಿಯರ ವಿರುದ್ದ ದಾವಾ ಆಸ್ತಿಗಳನ್ನು ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳೆಂದು ಮತ್ತು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರ ದಾಖಲಾತಿ ನಂ 2449/2010-11 ಮತ್ತು 1ನೇ ಪ್ರತಿವಾದಿಯು 3ನೇ ಪ್ರತಿವಾದಿಗೆಬರೆದುಕೊಟ್ಟ ನೊಂದಾಯಿತ ಕ್ರಯ ಪತ್ರ ದಾಖಲಾತಿ ನಂ.2450/2010-11 ಇವುಗಳನ್ನು ಶೂನ್ಯವೆಂದು ಘೋಷಣೆ ಮಾಡಬೇಕೆಂದು ಮತ್ತು ಪ್ರತಿವಾದಿಯರ ವಿರುದ್ದ ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಅಸಲು ದಾವಾ ನಂ 191/2016 ರ ವಾದ ಪತ್ರ ಮತ್ತು ಪ್ರತಿವಾದ ಪತ್ರ ಮತ್ತು ಅಸಲು ದಾವಾ ನಂ.21/2012 ರ ವಾದ ಪತ್ರ ಮತ್ತು ಪ್ರತಿವಾದಪತ್ರದ ಸಾರಾಂಶವನ್ನು ಈಗಾಗಲೇ ಸವಿಸ್ತಾರವಾಗಿ ಚರ್ಚಿಸಲಾಗಿರುತ್ತದೆ.

34. ಅಸಲು ದಾವಾ ನಂ.191/2016 ರಲ್ಲಿ ವಾದಿಯ ವಾದವೆನೆಂದರೆ, ವಾದಿಯು ದಾವಾ ಆಸ್ತಿಯ ಪ್ರಾಮಾಣೀಕ ಖರೀದಿದಾರರಾಗಿದ್ದು, 1ನೇ ಪ್ರತಿವಾದಿಯು ಪ್ರತಿವಾದಿಯರ ಕುಟುಂಬದ ಕರ್ತನಾಗಿದ್ದುತನ್ನ ಕುಟುಂಬದ ಅಡಚಣೆಗೋಸ್ಕರ ದಾವಾ ಆಸ್ತಿಯನ್ನು ವಾದಿಗೆ ನೊಂದಾಯಿತ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅಸಲು ದಾವಾ ನಂ.191/2016 ರಲ್ಲಿ ಪ್ರತಿವಾದಿಯರ ವಾದವೆನೆಂದರೆ, ದಾವಾ ಆಸ್ತಿಗಳು ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಸದರಿ ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರು ಜಂಟಿ ಸ್ವಾಧೀನತೆಯನ್ನು ಹೊಂದಿರುತ್ತಾರೆ. ಮುಂದುವರೆದು 1ನೇ ಪ್ರತಿವಾದಿಯು ಒಬ್ಬ ಅನಕ್ಷರಸ್ಥ ಮತ್ತು ವ್ಯವಹಾರ ಜ್ಞಾನ ಇಲ್ಲದ

ಹಳ್ಳಿಯ ಮಹಿಳೆಯಾಗಿದ್ದು, 2ನೇ ಪ್ರತಿವಾದಿಯರ ಕುಟುಂಬದ ಎಲ್ಲ ವ್ಯವಹಾರವನ್ನು ನೋಡಿಕೊಳ್ಳುತ್ತಿರುತ್ತಾರೆ. ಆದರೆ 1ನೇ ಪ್ರತಿವಾದಿಯು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ತನ್ನ ಹೆಸರನ್ನು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ದಾಖಲೆ ಮಾಡಿಕೊಂಡು ವಾದಿಗೆ ಮತ್ತು ವಾದಿಯ ತಮ್ಮನಾದ ಮಲ್ಲಿಕಾರ್ಜುನ ಇವರಿಗೆ ನೊಂದಾಯಿತ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ. ಆದರೆ 1ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾರಾಟಮಾಡುವ ಯಾವುದೇ ಹಕ್ಕು ಇರುವುದಿಲ್ಲ.

35. ಅಸಲು ದಾವಾ ನಂ 21/2012 ರಲ್ಲಿ ವಾದಿಯ ವಾದವೇನೆಂದರೆ, 1ನೇ ವಾದಿಯು ವಾದಿಯರ ಕುಟುಂಬದ ಕರ್ತನಾಗಿದ್ದು, ದಾವಾ ಆಸ್ತಿಗಳು ವಾದಿಯರ ಮತ್ತು 1ನೇ ಪ್ರತಿವಾದಿಯ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಸ್ವತ್ತುಗಳಾಗಿದ್ದು, 1ನೇ ಪ್ರತಿವಾದಿಯು ವಾದಿಯರಿಗೆ ತಿಳಿಯದಂತೆ 2 ಮತ್ತು 3ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ. 1ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರುವುದಿಲ್ಲ. ಅಸಲು ದಾವಾ ನಂ. 21/2012 ರಲ್ಲಿ 3ನೇ ಪ್ರತಿವಾದಿಯ ವಾದವೇನೆಂದರೆ, 2 ಮತ್ತು 3ನೇ ಪ್ರತಿವಾದಿಯರು ದಾವಾ ಆಸ್ತಿಗಳ ಪ್ರಾಮಾಣೀಕ ಖರೀದಿದಾರಾಗಿದ್ದು, 1ನೇ ಪ್ರತಿವಾದಿಯು ವಾದಿಯರ ಕುಟುಂಬದ ಕರ್ತನಾಗಿದ್ದು ಮತ್ತು ವಾದಿಯರ ಕುಟುಂಬದ ಅಜ್ಞಾನ ಸಂರಕ್ಷಣ ಪಾಲಕರಾಗಿದ್ದು, 1ನೇ ಪ್ರತಿವಾದಿಯು ತಮ್ಮ ಕುಟುಂಬದ ಅಡಚಣೆಗೋಸ್ಕರ ದಾವಾ ಸ್ವತ್ತುಗಳನ್ನು 2 ಮತ್ತು 3ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ. ಪ್ರಸ್ತುತವಾಗಿ ವಾದಿಯ ದಾವಾ ಆಸ್ತಿಯ ಸ್ವಾಧೀನತೆಗೆ ಪ್ರತಿವಾದಿಯರು ತೊಂದರೆ ನೀಡುತ್ತಿರುತ್ತಾರೆಂದು ಹೇಳುತ್ತಾರೆ.

36. ವಾದಿ ತಾಯಮ್ಮ ಗಂಡ ಮಲ್ಲಿಕಾರ್ಜುನ ದೇಸಾಯಿ ಇವರು ತಮ್ಮ

ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತು ಪಡಿಸಲು ವಾದಿಯು ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿ ತನ್ನನ್ನು ತಾನು ಪಿಡಬ್ಲೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಪಿಡಬ್ಲೂ-1 ರವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಪಿಡಬ್ಲೂ-1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ಒಟ್ಟು 25 ದಾಖಲಾತಿಗಳನ್ನು ನಿಪಿ-1 ರಿಂದ ನಿಪಿ-25 ಎಂದು ಗುರುತಿಸಿಕೊಂಡಿರುತ್ತಾರೆ.

37. ನಿಪಿ-1 ದಿನಾಂಕ 14-09-2010 ರಂದು ದೃಢೀಕೃತ ಮಾರಾಟ ಪತ್ರವಾಗಿದ್ದು ಸದರಿ ದಾಖಲೆಯ ಪ್ರಕಾರ ಶರಣಮ್ಮ ಗಂಡ ಬಸವರಾಜ ಇವರು ವಾದಿಯಾದ ತಾಯಮ್ಮ ಗಂಡ ಮಲ್ಲಿಕಾರ್ಜುನ ದೇಸಾಯಿ ಇವರಿಗೆ ಸ.ನಂ.150 ರಲ್ಲಿ 04 ಎಕರೆ ಜಮೀನನ್ನು ರೂ.1,60,000/- ಗಳಿಗೆ ಮಾರಾಟ ಮಾಡಿರುತ್ತಾರೆ. ಮುಂದುವರೆದು ಸದರಿ ದಾಖಲೆಯಲ್ಲಿ ಶರಣಮ್ಮ ಗಂಡ ಬಸವರಾಜ ಇವರು ತನ್ನ ಕುಟುಂಬದ ಅವಶ್ಯಕತೆಗಳಿಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿರುತ್ತೇನೆ ಎಂದು ಸದರಿ ದಾಖಲೆಯಲ್ಲಿ ನಮೂದಾಗಿರುತ್ತದೆ. ನಿಪಿ-2 ಬಳಬಟ್ಟಿ ಗ್ರಾಮದ ಜಮೀನು ಸ.ನಂ.150 ರ ಪಹಣಿ ಪತ್ರಿಕೆಯಾಗಿದ್ದು, ಇದರಲ್ಲಿ ತಾಯಮ್ಮ ಗಂಡ ಮಲ್ಲಿಕಾರ್ಜುನ ದೇಸಾಯಿ ಹೆಸರಿನಲ್ಲಿ 4 ಎಕರೆ ಜಮೀನು ಇದ್ದು, ವಾದಿಯ ಸಹೋದರರಾದ ಮಲ್ಲಿಕಾರ್ಜುನ ತಂದೆ ಶರಣಪ್ಪ ಮುಕ್ಕಣಿ ಇವರ ಹೆಸರಿನಲ್ಲಿ 02 ಎಕರೆ ಜಮೀನು ಇದ್ದು, ಶರಣಮ್ಮ ಗಂಡ ಬಸವರಾಜ ಹೆಸರನಲ್ಲಿ 08 ಎಕರೆ 34 ಗುಂಟೆ ಜಮೀನು ದಾಖಲಾಗಿರುವದು ಕಂಡು ಬರುತ್ತದೆ. ನಿಪಿ-3 ದಿನಾಂಕ 14.09.2010 ರ ದೃಢೀಕೃತ ಮಾರಾಟ ಪತ್ರವಾಗಿದ್ದು, ಸದರಿ ದಾಖಲೆ ಪ್ರಕಾರಣ ಶರಣಮ್ಮ ಗಂಡ ಬಸವರಾಜ ಇವರು ವಾದಿಯ ಸಹೋದರರಾದ

ಮಲ್ಲಿಕಾರ್ಜುನ ಶಂದೆ ಶರಣಪ್ಪ ಮುಕ್ಕಾಣಿ ಇವರಿಗೆ ಬಳಬಟ್ಟಿ ಗ್ರಾಮದ ಜಮೀನು ಸ.ನಂ. 150 ರಲ್ಲಿ 2 ಎಕರೆ ಜಮೀನನ್ನು ರೂ 80,000/- ಗಳಿಗೆ ಮಾರಾಟ ಮಾಡಿರುವದು ಕಂಡುಬರುತ್ತದೆ. ನಿಪಿ-4 ದಿನಾಂಕ 19.08.2014 ರ ಮಾರಾಟ ಪತ್ರವಾಗಿದ್ದು, 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರು ಯಾಸೀನಸಾಬ ತಂದೆ ಖಾಸಿಂಸಾಬ ಇವರಲ್ಲಿ ಸ.ನಂ.150 ರಲ್ಲಿ 1 ಎಕರೆ ಜಮೀನನ್ನು ರೂ 71,000/- ಗಳಿಗೆ ಮಾರಾಟ ಮಾಡಿರುವದು ಕಂಡು ಬರುತ್ತದೆ. ನಿಪಿ-5 ದಿನಾಂಕ 13.4.2015 ರಲ್ಲಿ ದೃಢೀಕೃತ ಮಾರಾಟ ಪತ್ರವಾಗಿದ್ದು, 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರು ಉಸಾಮಾನಸಾಬ ತಂದೆ ಸುಕ್ರೂಸಾಬ ಚೌದರಿ ಇವರಿಗೆ ಸನಂ 150 ರಲ್ಲಿ 35 ಗುಂಟೆ ಜಮೀನನ್ನು ರೂ 85,000/- ಗಳಿಗೆ ಮಾರಾಟ ಮಾಡಿರುವದು ಕಂಡುಬರುತ್ತದೆ. ನಿಪಿ-7 ಬಳಬಟ್ಟಿ ಗ್ರಾಮದ ಸನ 2010-11 ಸನಂ 150/1 ರ ಪಹಣಿ ಪತ್ರಿಕೆಯಾಗಿದ್ದು, 1ನೇ ಪ್ರತಿವಾದಿಯಾದ ಶರಣಮ್ಮಗಂಡ ಬಸವರಾಜ ಇವರ ಹೆಸರಿನಲ್ಲಿ 07 ಎಕರೆ 35 ಗುಂಟೆ ಇರುವದು ಕಂಡು ಬರುತ್ತದೆ. ನಿಪಿ-8 ಸನ್ 2011-12 ರ ಫಹಣಿ ಪತ್ರಿಕೆಯಾಗಿದ್ದು, ಇದರಲ್ಲಿ 1ನೇ ಪ್ರತಿವಾದಿಯ ಹೆಸರನಲ್ಲಿ 01 ಎಕರೆ 35 ಗುಂಟೆ ಜಮೀನು ಮತ್ತು ತಾಯಮ್ಮ ಗಂಡ ಮಲ್ಲಿಕಾರ್ಜುನ ಇವರ ಹೆಸರಿನಲ್ಲಿ 04 ಎಕರೆ ಜಮೀನು ಮತ್ತು ಮಲ್ಲಿಕಾರ್ಜುನ ತಂದೆ ಶರಣಪ್ಪ ಇವರ ಹೆಸರಿನಲ್ಲಿ 02 ಎಕರೆ ಜಮೀನು ದಾಖಲಾಗಿರುವದು ಕಂಡು ಬರುತ್ತದೆ. ನಿಪಿ-9 ರಿಂದ 21 ಸನ್ 2012 ರಿಂದ 2025 ರವರಿಗೆ ಸ.ನಂ. 150 ರ ಫಹಣಿ ಪತ್ರಿಕೆಗಳಾಗಿದ್ದು, ಸದರಿ ತಾಯಮ್ಮ ಗಂಡ ಮಲ್ಲಿಕಾರ್ಜುನ, ಮಲ್ಲಿಕಾರ್ಜುನ ತಂದೆ ಶರಣಪ್ಪ ಮತ್ತು ಶರಣಮ್ಮ ಗಂಡ ಬಸವರಾಜ ಇವರ ಹೆಸರಿನಲ್ಲಿ ಜಮೀನುಗಳು ಮುಂದುವರೆದಿದ್ದು, ಕಂಡುಬರುತ್ತದೆ. ನಿಪಿ-22 ಎಂ.ಆರ್ ನಂ.ಟಿ-81-2010-20 ರ ಮುಟೇಶನ ಪತ್ರಿಕೆಯಾಗಿರುತ್ತದೆ. ನಿಪಿ-23 ದಿನಾಂಕ 14.09.2010 ರ

ನೊಂದಾಯಿತ ಖರೀದಿ ಪತ್ರವಾಗಿರುತ್ತದೆ. ನಿಪಿ-24 ದಿನಾಂಕ 06.05.2002 ರ ಮಾರಾಟ ಪತ್ರವಾಗಿದ್ದು, ಸದರಿ 1ನೇ ಪ್ರತಿವಾದಿ ಶರಣಮ್ಮ ಗಂಡ ಬಸವರಾಜ ಇವರು ಶ್ರೀಮತಿ ಜಹೀರಾಬೀ ಗಂಡ ಯಾಸಿನಸಾಬ ಚೌದರಿ ಇವರಿಗೆ ಸ.ನಂ.150 ರಲ್ಲಿ 2 ಎಕರೆ ಜಮೀನನ್ನು ಮಾರಾಟ ಮಾಡಿರುವದು ಕಂಡುಬರುತ್ತದೆ. ನಿಪಿ-25 ದಿನಾಂಕ 13.04.2015 ರ ನೊಂದಾಯಿತ ಮಾರಾಟ ಪತ್ರವಾಗಿದ್ದು, ಸದರಿ ಮಾರಾಟ ಪತ್ರದ ಪ್ರಕಾರ 1ನೇ ಪ್ರತಿವಾದಿ ಶರಣಮ್ಮ ಗಂಡ ಬಸವರಾಜ ಇವರು ಉಸಮಾನಸಾಬ ತಂದೆ ಸೂಕ್ರಸಾಬ ಚೌದರಿ ಇವರಿಗೆ ಸ.ನಂ 150 ರಲ್ಲಿ 35 ಗುಂಟೆ ಜಮೀನನ್ನು ರೂ.85,000/- ಗಳಿಗೆ ಮಾರಾಟ ಮಾಡಿರುವದು ಕಂಡು ಬರುತ್ತದೆ.

38. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಕೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರು ತನ್ನನ್ನು ತಾನು ಡಿಡಬ್ಲೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ನ್ಯಾಯಾಲಯದಲ್ಲಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚಿಸಿರುತ್ತಾರೆ. ತನ್ನ ಮೌಖಿಕ ಸಾಕ್ಷದ ಸಮರ್ಥನೆಗಾಗಿ ನಿಡಿ-1 ರಿಂದ 16 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

39. ನಿಡಿ-1 ಬಳಬಟ್ಟಿ ಗ್ರಾಮದ ಸ.ನಂ.150 ರ ಸನ 1974 ರ ಫಹಣಿ ಪತ್ರಿಕೆಯಾಗಿದ್ದು, ಸದರಿ ಸನಂ. 150 ಒಟ್ಟು ಕ್ಷೇತ್ರ 20 ಎಕರೆ 34 ಗುಂಟೆ ಜಮೀನು ಇದ್ದು ಇದರಲ್ಲಿ ದಾನಪ್ಪ ತಂದೆ ಶಿವಪ್ಪ ದಾನಾ ಇವರ ಹೆಸರು ಕಡಿಮೆಯಾಗಿ ಅವರ ಮಕ್ಕಳಾದ, ಸಿದ್ರಾಮಪ್ಪ, ಶಣ್ಮುಖಪ್ಪ, ಬಸವರಾಜ ಇವರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುವುದು ಕಂಡು

ಬರುತ್ತದೆ. ನಿಡಿ-2 ಬಳಬಟ್ಟಿ ಗ್ರಾಮದ ಸನಂ 150 ರ ಸನ್ 1978 ರ ಫಹಣಿ ಪತ್ರಿಕೆಯಾಗಿದ್ದು, ಇದರಲ್ಲಿ ಸಿದ್ರಾಮಪ್ಪ ಮತ್ತು ಶಣ್ಮುಖಪ್ಪ ಇವರ ಹೆಸರು ಕಡಿಮೆಯಾಗಿ ಬಸವರಾಜ ತಂದೆ ದಾನಪ್ಪ ಇವರು ಹೆಸರು ಮುಂದುವರೆದು ಕಂಡು ಬರುತ್ತದೆ. ನಿಡಿ-3 ಸನಂ.150 ರ ಫಹಣಿ ಪತ್ರಿಕೆಯಾಗಿದ್ದು, ಇದರಲ್ಲಿ ಬಸವರಾಜ ತಂದೆ ದಾನಪ್ಪ ಇವರ ಹೆಸರಿನಲ್ಲ 20 ಎಕರೆ 29 ಗುಂಟೆ ಜಮೀನು ದಾಖಲಾಗಿರುವದು ಕಂಡು ಬರುತ್ತದೆ. ನಿಡಿ-4 ಸನಂ.150 ರ ಸನ್ 1993-94 ರ ಪಹಣಿ ಪತ್ರಿಕೆಯಾಗಿದ್ದು, ಇದರಲ್ಲಿ ಬಸವರಾಜ ತಂದೆ ದಾನಪ್ಪ ಹೆಸರಿನಲ್ಲಿ 08 ಎಕರೆ 34 ಗುಂಟೆ ಜಮೀನು ಮತ್ತು 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರ ಹೆಸರಿನಲ್ಲಿ 12 ಎಕರೆ ಜಮೀನು ದಾಖಲಾಗಿರುವದು ಕಂಡು ಬರುತ್ತದೆ. ನಿಡಿ-5 ಸನಂ 150 ರ ಕೈಬರಹ ಪಹಣಿಯಾಗಿದ್ದು, ಇದರಲ್ಲಿ ಶರಣಮ್ಮ ಗಂಡ ಬಸವರಾಜ ದಾನಾ ಇವರ ಹೆಸರನಲ್ಲಿ 12 ಎಕರೆ ಜಮೀನು ದಾಖಲಾಗಿರುವದು ಕಂಡು ಬರುತ್ತದೆ. ನಿಡಿ-6 ದಿನಾಂಕ 14.09.2010 ರ ದೃಢೀಕೃತ ಮಾರಾಟ ಪತ್ರವಾಗಿರುತ್ತದೆ. ನಿಡಿ-7 ದಿನಾಂಕ 14.09.2010 ರ ಮತ್ತೊಂದು ಮಾರಾಟ ಪತ್ರವಾಗಿರುತ್ತದೆ. ನಿಡಿ-8 ಮತ್ತು ನಿಡಿ-9 ತಕರಾರು ಅರ್ಜಿಯಾಗಿದ್ದು, ಸದರಿ ಶರಣಮ್ಮ ಗಂಡ ಬಸವರಾಜ ಇವರು ತಹಶೀಲ್ದಾರ ಯಡ್ರಾಮಿ ಇವರಿಗೆ ವಾದಿಯರ ವಿರುದ್ದ ತಕರಾರು ಸಲ್ಲಿಸಿದ್ದು ಕಂಡು ಬರುತ್ತದೆ. ನಿಡಿ-10 ತಕರಾರು ಅರ್ಜಿಯಾಗಿದ್ದು, 1ನೇ ಪ್ರತಿವಾದಿಯಾದ ಶರಣಮ್ಮ ಗಂಡಬಸವರಾಜ ಇವರು ಉಪ ನೊಂದಣಾಧಿಕಾರಿಗಳು ಜೇವರ್ಗಿ, ಇವರಿಗೆ ದಾವಾ ಆಸ್ತಿಗಳಿಗೆ ಸಂಬಂಧ ಪಟ್ಟಂತೆ ತಕರಾರು ಅರ್ಜಿ ಸಲ್ಲಿಸಿದ್ದು ಕಂಡು ಬರುತ್ತದೆ. ನಿಡಿ-11 ಶರಣಮ್ಮ ಗಂಡ ಬಸವರಾಜ ಇವರು ಹೈದ್ರಾಬಾದ ಬ್ಯಾಂಕ ಮ್ಯಾನೇಜರ ಇವರಿಗೆ ತಕರಾರು ಅರ್ಜಿ ಕೊಟ್ಟಿರುವದು ಕಂಡು ಬರುತ್ತದೆ. ನಿಡಿ-12 ನೊಂದಾಣಿಕಾರಿಗಳು ಗುಲಬರ್ಗಾ ಇವರಿಗೆ 1ನೇ ಪ್ರತಿವಾದಿ ಶರಣಮ್ಮ ಗಂಡ ಬಸವರಾಜ ಇವರು ತಕರಾರು ಅರ್ಜಿ ನೀಡಿದ್ದು

KAKB620003692012

ಕಂಡು ಬರುತ್ತದೆ. ನಿಡಿ-13 1ನೇ ಪ್ರತಿವಾದಿಯಾದ ಶರಣಮ್ಮ ಇವರು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿಗಳು ಕಲಬುರಗಿ ಇವರಿಗೆ ದಾವಾ ಆಸ್ತಿಗಳಿಗೆ ಸಂಬಂಧ ಪಟ್ಟಂತೆ ತಮ್ಮ ಪಿರ್ಯಾದಿ ನೀಡಿರುವುದು ಕಂಡು ಬರುತ್ತದೆ. ನಿಡಿ-14, 1ನೇ ಪ್ರತಿವಾದಿ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ, ದಿನಾಂಕ 12.10.2012 ರಂದು ತಹಶೀಲ್ದಾರ ಜೇವರ್ಗಿ ಇವರಿಗೆ ಜೆ ಫಾರ್ಮಾ ಮಾಡದಂತೆ ತಮ್ಮ ತಕರಾರು ಅರ್ಜಿಯನ್ನು ಸಲ್ಲಿಸಿರುವದು ಕಂಡು ಬರುತ್ತದೆ. ನಿಡಿ-15 ಮತ್ತು ನಿಡಿ-16 ಮುಟೇಶನ ಪ್ರತಿಯಾಗಿರುತ್ತದೆ.

40. ಉಭಯ ಪಕ್ಷಕಾರರು ಹಾಜರುಪಡಿಸಿದ ಮೌಖಿಕ ಮತ್ತು ದಾಖಲಾತಿಯ ಸಾಕ್ಷವನ್ನು ಗಮನಿಸಲಾಯಿತು. ಅಸಲು ದಾವಾ ನಂ.191/2016 ರಲ್ಲಿ ಪ್ರತಿವಾದಿಯರ ವಾದವೆನೆಂದರೆ ದಾವಾ ಆಸ್ತಿಗಳು ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆಂದು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾರೆ. ಸದರಿ ಅಂಶವನ್ನು ನಿರೂಪಿಸಲು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕೈಬರಹ ಪಹಣಿಗಳನ್ನು ಹಾಜರುಪಡಿಸಿರುತ್ತಾರೆ. ನಿಡಿ-1 ಸನ್ 150 ರ 1974 ರ ಪಹಣಿ ಪತ್ರಿಕೆಯಾಗಿದ್ದು, ಮೂಲತಃ ಸದರಿ ಜಮೀನು ದಾನಪ್ಪ ತಂದೆ ಶಿವಪ್ಪ ದಾನಾ ಇವರ ಹೆಸರಿನಲ್ಲಿ ಇದ್ದು, ಸದರಿ ದಾಖಲೆಯ ಪ್ರಕಾರ ದಾನಪ್ಪ ತಂದೆ ಶಿವಪ್ಪ ಹೆಸರು ಕಡಿಮೆಯಾಗಿ ಸಿದ್ರಾಮಪ್ಪ ತಂದೆ ದಾನಪ್ಪ, ಶಣ್ಮುಖಪ್ಪ ತಂದೆ ದಾನಪ್ಪ ಮತ್ತು ಬಸವರಾಜ ತಂದೆ ದಾನಪ್ಪ ಹೆಸರು ನಮೂದಾಗಿರುವದು ಕಂಡು ಬರುತ್ತದೆ. ನಂತರ 1983 ರಲ್ಲಿ ಸಿದ್ರಾಮಪ್ಪ ಮತ್ತು ಶಣ್ಮುಖಪ್ಪ ಹೆಸರು ಕಡಿಮೆಯಾಗಿ ಬಸವರಾಜ ತಂದೆ ದಾನಪ್ಪ ಇವರ ಹೆಸರು ದಾಖಲಾಗಿದ್ದು, ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಗಿರುತ್ತದೆ. ನಿಡಿ-4 ಸ.ನಂ.150 ರ ಸನ್ 1993 ಮತ್ತು 1994 ರ ಪಹಣಿ ಪತ್ರಿಕೆಯಾಗಿದ್ದು,

ಇದರಲ್ಲಿ 1ನೇ ಪ್ರತಿವಾದಿಯ ಗಂಡನಾದ ಬಸವರಾಜ ತಂದೆ ದಾನಪ್ಪ ಹೆಸರಿನಲ್ಲಿ 08 ಎಕರೆ 34 ಗುಂಟೆ ಜಮೀನು ಮತ್ತು 1ನೇ ಪ್ರತಿವಾದಿ ಹೆಸರಿನಲ್ಲಿ 12 ಎಕರೆ ಜಮೀನು ದಾಖಲಾಗಿರುವದು ಕಂಡು ಬರುತ್ತದೆ. ಸದರಿ ದಾಖಲೆಗಳಿಂದ ತಿಳಿದು ಬರುವುದನೆಂದರೆ ಸ.ನಂ.150 ಒಟ್ಟು ಕ್ಷೇತ್ರ 20 ಎಕರೆ 29 ಗುಂಟೆ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದು ರುಜುವಾತಾಗುತ್ತದೆ.

41. ಪ್ರಸ್ತುತ ಅಸಲು ದಾವಾ ನಂ. 21/2012 ಮತ್ತು ಅಸಲು ದಾವಾ ನಂ. 191/2016 ರಲ್ಲಿ ಸ.ನಂ.150 ರಲ್ಲಿ 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರು 2ನೇ ಪ್ರತಿವಾದಿಗೆ 04 ಎಕರೆ ಜಮೀನನ್ನು ಮತ್ತು 3ನೇ ಪ್ರತಿವಾದಿಗೆ 02 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಅಸಲು ದಾವಾ ನಂ.191/2016 ರಲ್ಲಿ ವಾದಿಯ ವಾದವೆನೆಂದರೆ, ವಾದಿಯು ಮತ್ತು ವಾದಿಯ ತಮ್ಮನಾದ ಬಸವರಾಜ ತಂದೆ ಶರಣಪ್ಪ ಇವರು ದಾವಾ ಆಸ್ತಿಗಳ ಪ್ರಾಮಾಣೀಕ ಖರೀದಿದಾರೆಂದು ಹೇಳುತ್ತಾರೆ. ಅಸಲು ದಾವಾ ನಂ. 21/2012 ರಲ್ಲಿ ವಾದಿಯರ ವಾದವೆನೆಂದರೆ, 1ನೇ ಪ್ರತಿವಾದಿಯಾದ ಶರಣಮ್ಮ ಇವರು ಒಬ್ಬ ಅನಕ್ಷರಸ್ಥ ಮತ್ತು ಹಳ್ಳಿಯ ಮಹಿಳೆಯಾಗಿದ್ದು, ಅವರಿಗೆ ತಮ್ಮ ಕುಟುಂಬದ ಯಾವುದೇ ವ್ಯವಹಾರ ಜ್ಞಾನ ಇರದ ಕಾರಣ 1ನೇ ವಾದಿಯಾದ ಗಂಗಮ್ಮ ತಂದೆ ಬಸವರಾಜ ಇವರು ವಾದಿಯರ ಕುಟುಂಬದ ಕರ್ತನಾಗಿದ್ದು, ವಾದಿಯರು ಮತ್ತು ಪ್ರತಿವಾದಿ ನಂ.1 ಕುಟುಂಬದ ಎಲ್ಲಾ ವ್ಯವಹಾರಗಳನ್ನು, 1ನೇ ವಾದಿಯಾದ ಗಂಗಮ್ಮ ತಂದೆ ಬಸವರಾಜ ಇವರು ನೋಡಿಕೊಳ್ಳುತ್ತಿದ್ದು, 1ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇಲ್ಲವೆಂದು ತಮ್ಮ ವಾದ ಪತ್ರದಲ್ಲಿ ಹೇಳಿರುತ್ತಾರೆ. ಈ ಹಂತದಲ್ಲಿ ಅಸಲು ದಾವಾ ನಂ.191/2016 ರಲ್ಲಿ 1ನೇ ಪ್ರತಿವಾದಿಯ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಹೇಳಿರುತ್ತಾರೆ.

“2ನೇ ಪ್ರತಿವಾದಿಯು ಮದುವೆಯಾಗಿ ತನ್ನ ಗಂಡನ ಮನೆಯಲ್ಲಿ ಇರುತ್ತಾಳೆ ಎಂದರೆ ಸರಿ. 2ನೇ ಪ್ರತಿವಾದಿಗೆ 3 ಜನ ಮಕ್ಕಳು ಇರುತ್ತಾರೆ . 2010 ರಲ್ಲಿ 2 ರಿಂದ 6 ನೇ ಪ್ರತಿವಾದಿಯರು ಅಪ್ರಾಪ್ತ ವಯಸ್ಕರು ಇದ್ದರು ಎಂದರೆ ಸರಿ.

42. ಸದರಿ ಪಾಟೀ ಸವಾಲಿನಿಂದ ತಿಳಿದು ಬರುವುದೇನೆಂದರೆ, 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರ ಮಕ್ಕಳು ಸನ್ 2010 ರಲ್ಲಿ ಅಲ್ಪವಯಸ್ಕಾರಾಗಿರುವುದು ಮತ್ತು 2008 ರಲ್ಲಿ 1ನೇ ಪ್ರತಿವಾದಿಯ ಗಂಡ ಬಸವರಾಜ ಇತನು ಮೃತರಾಗಿರುವುದರಿಂದ 1ನೇ ಪ್ರತಿವಾದಿಯು 2 ರಿಂದ 6ನೇ ಪ್ರತಿವಾದಿಯ ಅಜ್ಞಾನ ಸಂರಕ್ಷಣಪಾಲಕ ಆಗಿರುತ್ತಾರೆಂದು ತಿಳಿದು ಬರುತ್ತದೆ.

43. ಈ ಹಂತದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು **ಆರ್.ಎಫ್.ಎ ನಂ. 6041/2016 ಮನುಗುಪ್ತಾ ವಿರುದ್ದ ಸುಜಾತಾ ಶರ್ಮಾ** ಮತ್ತು ಇತರರು ಈ ಕೆಳಗಿನಂತೆ ಮಾನ್ಯ ದೆಹಲಿ ಉಚ್ಚ ನ್ಯಾಯಾಲಯ ಪ್ಯಾರಾ ನಂ.18 ರಲ್ಲಿ ಈಕೆಳಗಿನಂತೆ ಹೇಳಿರುತ್ತಾರೆ.

> The learned Single Judge in the impugned judgment observed that the necessary qualification for becoming a Karta was being a Coparcener of the HUF. The only impediment that disallowed a woman from becoming a Karta was the lack of this necessary qualification. The Amended Section 6 of the The Hindu Succession Act, 1956 (hereinafter referred to as the "Act, 1956") was introduced in 2005 as a socially beneficial legislation to give equal rights of inheritance to Hindu males and

females; the marriage of the plaintiff did not affect her rights in the Coparcenary as the provision clearly defines the statutory right of a female to be absolute without admitting any exception or restriction such as marriage. With the removal of this disqualifying factor, nothing prevents the eldest female Coparcener from becoming the Karta of an HUF. It was held that the Amendment, brought in Section 6 of the Act, 1956 by the Amendment Act, 2005, does not impose any restriction on the right of a woman of being coparcener and she cannot be denied a status of Karta to manage the affairs, including the property of HUF. The Suit was decided in favour of the plaintiff/respondent No.1and she was declared the Karta of "D.R. Gupta & Sons HUF".

44. ಸದರಿ ತೀರ್ಪನ್ನು ಪ್ರಸ್ತುತವಾಗಿ ಈ ದಾವೆಗೆ ಅನ್ವಯಿಸಿದಾಗ 1ನೇ ಪ್ರತಿವಾದಿಯ ಶರಣಮ್ಮ ಗಂಡ ಬಸವರಾಜ ಇವರು ತಮ್ಮ ಗಂಡ ಬಸವರಾಜ ಇವರು ಮೃತರಾದ ನಂತರ ಕುಟುಂಬದ ಹಿರಿಯರಾಗಿರುವುದರಿಂದ ಮತ್ತು ದಾವಾ ಆಸ್ತಿಯು 1ನೇ ಪ್ರತಿವಾದಿ ಶರಣಮ್ಮ ಗಂಡ ಬಸವರಾಜ ಇವರ ಹೆಸರಿನಲ್ಲಿ ಇರುವುದರಿಂದ 1ನೇ ಪ್ರತಿವಾದಿ ಶರಣಮ್ಮ ಗಂಡ ಬಸವರಾಜ ಇವರೇ ತಮ್ಮ ಕುಟುಂಬದ ಕರ್ತನಾಗಿರುತ್ತಾರೆಂದು ತಿಳಿದು ಬರುತ್ತದೆ.

45. ಅಸಲು ದಾವಾ ನಂ. 21/2012 ರಲ್ಲಿ ವಾದಿಯರು ದಾವಾ ಆಸ್ತಿ ಸನಂ.150 ಸದರಿ ಸ್ವತ್ತು ವಾದಿಯರು ಮತ್ತು 1ನೇ ಪ್ರತಿವಾದಿಯ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಸ್ವತ್ತುಗಳು ಇರುತ್ತವೆಂದು ಹೇಳುತ್ತಾರೆ.

ಮುಂದುವರೆದು ವಾದಿಯರಿಗಾಗಲೀ ಮತ್ತು 1ನೇ ಪ್ರತಿವಾದಿಗಾಗಲೀ ದಾವಾ ಸ್ವತ್ತನ್ನು ಮಾರಾಟ ಮಾುಡವ ಮಾಲೀಕತ್ವ ಮತ್ತು ಅಧಿಕಾರಿ ಇಲ್ಲವೆಂದು ಹೇಳುತ್ತಾರೆ. ಮುಂದುವರೆದು 1ನೇ ಪ್ರತಿವಾದಿ 2ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಮಾರಾಟ ಪತ್ರ ದಾಖಲಾತಿ ನಂ.2449/2010-11 ಮತ್ತು 3ನೇ ಪ್ರತಿವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರ ದಾಖಲಾತಿ ನಂ.2450/2010-11 ಇವುಗಳನ್ನು ಶೂನ್ಯವೆಂದು ಘೋಷಣೆ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ. 2 ಮತ್ತು 3ನೇ ಪ್ರತಿವಾದಿಯರು 1ನೇ ಪ್ರತಿವಾದಿಯು ತಮ್ಮ ಕುಟುಂಬದ ಅಡಚಣೆಗೋಸ್ಕರ ದಾವಾ ಆಸ್ತಿಯನ್ನು ತಮಗೆ ಮಾರಾಟ ಮಾಡಿರುತ್ತಾರೆಂದು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳುತ್ತಾರೆ. ಈ ಹಂತದಲ್ಲಿ

46. ಈ ಹಂತದಲ್ಲಿ ಈ ನ್ಯಾಯಾಲಯವು **ಕಾನೂನುಬದ್ಧ ಅವಶ್ಯಕತೆ ಎಂದರೆ ಏನು ಎನ್ನುವ ಬಗ್ಗೆ ಮುಲ್ಲಾರವರ ಹಿಂದೂ ಕಾನೂನಿನ 22ನೇ ಮುದ್ರಣದ 241ನೇ ನಿಯಮವನ್ನು ಚರ್ಚಿಸಲು ಇಚಿಸುತ್ತದೆ.**

ಒಬ್ಬ ಕರ್ತನು ಅವಿಭಕ್ತ ಕುಟುಂಬದ ಸ್ವತ್ತನ್ನು ಈ ಕೆಳಗಿನ ಷರತ್ತುಗಳ ಮೇಲೆ ಮಾರಾಟ ಮಾಡಬಹುದು.

1. ಮಾರಾಟ ಮಾಡುವ ಕಾಲದಲ್ಲಿ ಅಸ್ತಿತ್ವದಲ್ಲಿರುವ ಪ್ರಾಪ್ತ ವಯಸ್ಕ ದಾಯಾದಿಗಳ ಸಮ್ಮತಿ ಇರತಕ್ಕದ್ದು.

2. ಕಾನೂನುಬದ್ದ ಅವಶ್ಯಕತೆಗಾಗಿ

3. ಸಂಪದದ ಪ್ರಯೋಜನಕ್ಕಾಗಿ ಒಬ್ಬ ಅವಿಭಕ್ತ ಕುಟುಂಬದ ಕರ್ತನು ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಹೊಂದಿರುತ್ತಾನೆ. ಅದೇ ರೀತಿ **ಕಾನೂನುಬದ್ಧ ಅವಶ್ಯಕತೆ** ಎಂದರೆ, ಈ ಕೆಳಕಂಡ ಅಂಶಗಳಲ್ಲಿ ಯಾವುದಾದರೂ ಒಂದು ಆಧಾರ ಅವಶ್ಯಕವಾಗಿ ಇರಲೇಬೇಕಾಗುತ್ತದೆ.

1. ಅವಿಭಕ್ತ ಕುಟುಂಬದಿಂದ ಸರ್ಕಾರಕ್ಕೆ ಸಂದಾಯ ಆಗಬೇಕಾಗಿರುವ ಕಂದಾಯ ಮತ್ತು ಇತರ ರುಣ ಭಾರಗಳು.

2. ಅವಿಭಕ್ತ ಕುಟುಂಬದ ಸದಸ್ಯರ ಮತ್ತು ದಾಯಾದಿಗಳ ಜೀವನ ನಿರ್ವಹಣ ವೆಚ್ಚ.

3. ದಾಯಾದಿಗಳ ಮತ್ತು ಅವರ ಹೆಣ್ಣು ಮಕ್ಕಳ ವಿವಾಹದ ಖರ್ಚು.

4. ಅವಿಭಕ್ತ ಕುಟುಂಬದ ಆಸ್ತಿಯನ್ನು ಪಡೆಯುವಲ್ಲಿ ಅಥವಾ ಆಸ್ತಿಯನ್ನು ಸಂರಕ್ಷಣೆ ಮಾಡಲು ವ್ಯಾಜ್ಯಗಳಿಗಾಗಿ ಅವಶ್ಯಕವಾಗಿ ಮಾಡಿರುವ ಖರ್ಚು.

5. ಅಗತ್ಯವಾದ ಅಂತ್ಯಕ್ರಿಯೆ ಅಥವಾ ಕುಟುಂಬದ ಸಮಾರಂಭಗಳ ಕಾರ್ಯ ಕ್ಷಮತೆ.

6. ಅವಿಭಕ್ತ ಕುಟುಂಬದ ಮುಖ್ಯಸ್ಥರನ್ನು ಅಥವಾ ಯಾವುದೇ ಸದಸ್ಯರನ್ನು ಗಂಭೀರ ಕ್ರಿಮಿನಲ್ ಆರೋಪದಿಂದ ರಕ್ಷಿಸಲು ತಗುಲುವ ವೆಚ್ಚಗಳು.

7. ಅವಿಭಕ್ತ ಕುಟುಂಬದ ವ್ಯವಹಾರಕ್ಕಾಗಿ ಅಥವಾ ಇತರ ಅವಶ್ಯಕತೆಗಳಿಗಾಗಿ ಮಾಡಿದ ಸಾಲ ಮರುಪಾವತಿ.

47. ಈ ಮೇಲ್ಕಂಡ ಅಂಶಗಳು ಕಾನೂನುಬದ್ಧ ಅವಶ್ಯಕತೆ ಎಂದು ಸ್ಪಷ್ಟವಾಗಿರುತ್ತದೆ. ಆದರೆ 1ನೇ ಪ್ರತಿವಾದಿ ತಮ್ಮ ಪಾಟೀ ಸವಾಲಿನಲ್ಲಿ ವಾದಿಯರು ತನಗೆ ಹೈದ್ರಾಬಾದ ಬ್ಯಾಂಕನಲ್ಲಿ ಸಾಲ ತಿರಿಸುತ್ತೇನೆ ಎಂದು ಹೇಳಿ ವಾದಿ ಮತ್ತು ವಾದಿಯ ಸಹೋದರನಾದ ಬಸವರಾಜ ಇತನು ಮಾರಾಟ ಪತ್ರವನ್ನು ಬರೆಸಿಕೊಂಡಿರುತ್ತಾರೆಂದು ತಮ್ಮ ಪಾಟೀ ಸವಾಲಿನಲ್ಲಿ

KAKB620003692012

ಹೇಳಿರುತ್ತಾರೆ. 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರು ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಪ್ರತಿವಾದಿಯ ನಂ.2 ರಿಂದ 6 ರವರು ಅಲ್ಪವಯಸ್ಕಾರಾಗಿರುವದು ಕಂಡು ಬರುತ್ತದೆ. ಮುಂದುವರೆದು ನಿಪಿ-1 ಸ.ನಂ.150 ರ ಖರೀದಿ ಪತ್ರವಾಗಿದ್ದು, ಸದರಿ ಖರೀದಿ ಪತ್ರದಲ್ಲಿ 1ನೇ ಪ್ರತಿವಾದಿಯು ತನ್ನ ಕುಟುಂಬದ ಅಡಚಣೆಗೋಸ್ಕರ ಮಾರಾಟ ಮಾಡುತ್ತಿದ್ದೇನೆಂದು, ವಿಷಯವು ಪ್ಯಾರಾ ನಂ.2 ರಲ್ಲಿ ಸ್ಪಷ್ಟವಾಗಿ ನಮೂದಾಗಿರುತ್ತದೆ. 1ನೇ ಪ್ರತಿವಾದಿಯು ಹಾಜರುಪಡಿಸಿದ ದಾಖಲೆಗಳಲ್ಲಿ ನಿಡಿ-12 ರಲ್ಲಿ 1ನೇ ಪ್ರತಿವಾದಿ ಶರಣಮ್ಮ ಗಂಡ ಬಸವರಾಜ ಇವರು 2007 ರಲ್ಲಿ ಟ್ರ್ಯಾಕ್ಟರ ನಂ.ಕೆಎ-32-8579-8580 ಖರೀದಿ ಮಾಡಿದ್ದು, ತನಗೆ ಸದರಿ ಬ್ಯಾಂಕನಲ್ಲಿ ಸಾಲವಿತ್ತು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಆದ್ದರಿಂದ 1ನೇ ಪ್ರತಿವಾದಿಯು ತನ್ನ ಕುಟುಂಬದ ಅಡಚಣೆಗೋಸ್ಕರ ದಾವಾ ಸ್ವತ್ತನ್ನು ವಾದಿ ಮತ್ತು ವಾದಿಯ ಸಹೋದರನಾದ ಬಸವರಾಜ ತಂದೆ ಶರಣಪ್ಪ ಇವರಿಗೆ ಸ್ಪಷ್ಟವಾಗಿ ಮಾರಾಟ ಮಾಡಿರುವದು ರುಜುವಾತಾಗುತ್ತದೆ. ಮುಖ್ಯವಾಗಿ 1ನೇ ಪ್ರತಿವಾದಿಯಾದ ಶರಣಮ್ಮ ಇವರು ಈಗಾಗಲೇ ಸ.ನಂ.150 ರಲ್ಲಿ 01 ಎಕರೆ ಜಮೀನನ್ನು ದಿನಾಂಕ 19-08-2014 ರಂದು ಯಾಸೀನ ತಂದೆ ಖಾಸಿಂಸಾಬ ಇವರಿಗೆ ಮಾರಾಟ ಮಾಡಿದ್ದು ಮತ್ತು ಸ.ನಂ.150 ರಲ್ಲಿ ದಿನಾಂಕ 13-04-2015 ರಲ್ಲಿ ಊಸ್ಮಾನಸಾಬ ತಂದೆ ಸುಕ್ರುಸಾಬ ಇವರಿಗೆ ಮಾರಾಟ ಮಾಡಿದ್ದು, ಸದರಿ ದಾಖಲೆಗಳಿಂದ ತಿಳಿದು ಬರುವುದೇನೆಂದರೆ, 1ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇರುವುದು ಕಂಡುಬರುತ್ತದೆ.

48. ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ, ಸದರಿ ನಿಡಿ-1 ಮತ್ತು ನಿಡಿ-2ರಲ್ಲಿ ಸದರಿ ಖರೀದಿ ಪತ್ರದಲ್ಲಿ ಕುಟುಂಬ ಮತ್ತು ಕಾನೂನುಬದ್ದ ಅವಶ್ಯಕತೆಗಳಿಗಾಗಿ ಮತ್ತು ಸಾಲ ಮರುಪಾವತಿಸಲು ಮಾರಾಟ ಅಗಿರುತ್ತದೆ

KAKB620003692012

ಎಂದು ಬರೆದಿರುತ್ತಾರೆ.

49. ಈ ಹಂತದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಹಾಜರುಪಡಿಸಿರುತ್ತಾರೆ.

1. **Civil Appeal No.7037 of 2021 Beereddy Dasaratharami Reddy Vs. V.Manjunath and another.** Hindu Law-Rights of 'Karta' relating to joint Hindu property code of Civil Procedure, 1908, Order XIV, Rule 1 'Karta' of joint Hindu property has right to execute areement for sale of that property, can sell it and receive its price. But only if there arises any legal necessity for it and fund is needed for meeting that domestic legal necessity. In such case, signature of other members of joint Hindu property is not needed for execution of agreement for slae or sale deed. Legal necessity if the 'sine qua non' for such transaction. In suit challenging such transaction, if issue regarding 'legal necessity' is not framed. That by itself will not be significant if parties are well-aware of this fact. In this case, in deed of agreement for sale itself it was mentioned that it is being executed for funds for meeting domestic necessities.Suprem Court, as such, approved

execution of agreement for sale and receipt of money by 'Karta'.

2. **<u>Civil Appeal No.3264 of 2011 Supreme Court. Kehar Singh (dead), Through LR.s and others Vs. Nachittar Kaur others.</u>** Hindu Law-Alienation of ancestral property by Karta-In sale-deed he clearly mentioned that family had two debit liabilities and there is need for improvement of agricultural land o family, therefore, he is selling ancestral property-It was also mentioned that money is needed for maintenance of family court below found that property-Plaintiff, who was son of Karta failed to prove that sale was not for legal necessity of members of Family-High Court after examining entire facts and evidence found that sale was for legal necessity, as such not against law-Supreme Court affirmed High Court's decision-Son of Karta was bound by sale.

3. **<u>Civil Appeal No.3264 of 2011 Supreme Court of India. Kehar Singh (dead), Through LR.s and others Vs. Nachittar Kaur others.</u>** Hindu Law-Joint Family

Property-Right of Karta to sell property-Once factum of existence of legal necessity stood proved, then no coparcener (son) has right to challenge sale made by Karta of his family-Plaintiff being a son was one of coparceners along with his father-He had no right to challenge such sale in light of findings of legal necessity being recorded against him-It was more so when plaintiff failed to prove by any evidence that there was no legal necessity for sale of suit land or that evidence adduced by defendants to prove factum of existence of legal necessity was either insufficient or irrelevant or no evidence at all-Appeal dismissed.

50. ಸದರಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಾಜರು ಪಡಿಸಿದ ತೀರ್ಪುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನೋಡಿದಾಗ ಸದರಿ ಎಲ್ಲಾ ತೀರ್ಪಿನಲ್ಲಿ ಕುಟುಂಬದ ಮತ್ತು ಕಾನೂನುಬದ್ದ ಅವಶ್ಯಕತೆ ಇರುವುದು ರುಜುವಾತಾಗಿರುತ್ತೆ. ಪ್ರಸ್ತುತ ದಾವೆಯಲ್ಲಿ 1ನೇ ಪ್ರತಿವಾದಿಯು ತಮ್ಮ ಕುಟುಂಬದ ಟ್ಯಾಕ್ಟರ ಸಾಲವನ್ನು ತೀರಿಸಲು ಮಾರಾಟ ಮಾಡಿರುತ್ತಾರೆ ಮತ್ತು 2 ರಿಂದ 6ನೇ ಪ್ರತಿವಾದಿಯರು ಸದರಿ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಸಂದರ್ಬದಲ್ಲಿ ಅಲ್ಪವಯಸ್ಕರಾಗಿರುವುದರಿಂದ ಅವರ ಅವಶ್ಯಕತೆಗಳನ್ನು ಪೂರಕ್ಯೆ ಮಾಡಲು 1ನೇ ಪ್ರತಿವಾದಿಯು ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ಮಾನ್ಯ ಸರ್ವೋಚ್ಚ

ನ್ಯಾಯಾಲಯದ ತೀರ್ಪುಗಳು ಈ ದಾವೆಗೆ ಅನ್ವಯವಾಗುತ್ತವೆ. ಎಂದು ಈ ನ್ಯಾಯಾಲಯ ಅಭಿಪ್ರಾಯ ಪಡುತ್ತದೆ.

51. ಅಸಲು ದಾವಾ ನಂ.21/2012 ರಲ್ಲಿ 1ನೇ ಪ್ರತಿವಾದಿಯ ಮಕ್ಕಳು, 1ನೇ ಪ್ರತಿವಾದಿಯ ವಿರುದ್ದ ಜಂಟಿ ಮಾಲೀಕತ್ವದ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಆದರೆ 1ನೇ ಪ್ರತಿವಾದಿಯಾದ ಶರಣಮ್ಮ ಗಂಡ ಬಸವರಾಜ ಇವರು ಅಸಲು ದಾವಾ ನಂ.191/2016 ರಲ್ಲಿ 2 ರಿಂದ 6ನೇ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರವನ್ನೆ ಅಳವಡಿಸಿಕೂಂಡಿರುತ್ತಾರೆ. ಸದರಿ ವಿಷಯದಿಂದ ತಿಳಿದು ಬರುವುದೇನೆಂದರೆ, ಅಸಲು ದಾವಾ ನಂ.21/2012 ನ್ನು ಶರಣಮ್ಮ ಗಂಡ ಬಸವರಾಜ ಮತ್ತು ಅವರ ಮಕ್ಕಳು ದುರುದ್ದೇಶದಿಂದ ಅಸಲು ದಾವಾ ನಂ.21/2012 ನ್ನು 2 ಮತ್ತು 3ನೇ ಪ್ರತಿವಾದಿಯ ವಿರುದ್ದ ಸಲ್ಲಿಸಿರುತ್ತಾರೆಂದು ರುಜುವಾತಾಗುತ್ತದೆ.

52. ಸದರಿ ವಾದಿ ಮತ್ತು ಪ್ರತಿವಾದಿಯರು ಹಾಜರುಪಡಿಸಿದ ದಾಖಲೆಗಳಿಂದ ತಿಳಿದುಬರುವುದೆನೆಂದರೆ ದಾವಾ ಆಸ್ತಿಯು ಪ್ರತಿವಾದಿಯರ ಕುಟುಂಬದ ಪಿತ್ರಾರ್ಜಿತ ಆಸ್ತಿ ಆಗಿದ್ದರು ಸಹಿತ 1ನೇ ಪ್ರತಿವಾದಿಯು ತನ್ನ ಕುಟುಂಬದ ಅಡಚಣೆಗೋಸ್ಕರ ವಾದಿ ಮತ್ತು ವಾದಿಯ ಸಹೋದರರಿಗೆ ಮಾರಾಟ ಮಾಡಿರುವದು ರುಜುವಾತಾಗುತ್ತದೆ. ಮುಂದುವರೆದು ದಾವಾ ಆಸ್ತಿಯಲ್ಲಿ ವಾದಿ ಮತ್ತು ವಾದಿಯ ಸಹೋದರರನ್ನು ಬಸವರಾಜ ಇತನು ಸ್ವಾಧೀನದಲ್ಲಿರುವದು ಕಂಡು ಬರುತ್ತದೆ. 1ನೇ ಪ್ರತಿವಾದಿಯು ತನ್ನ ಕುಟುಂಬದ ಅಡಚಣೆಗೋಸ್ಕರ ವಾದಿಗೆ ಮತ್ತು ವಾದಿಯ ಸಹೋದರನಾದ ಬಸವರಾಜ ತಂದೆ ಶರಣಪ್ಪ ಇವರಿಗೆ ದಾವಾ ಆಸ್ತಿಗಳನ್ನು ನೊಂದಾಯಿತ ಖರೀದಿ ಪತ್ರ ಮಾಡಿಕೊಟ್ಟಿರುವುದರಿಂದ ಸದರಿ ವಾದಿಯರ ಮೇಲೆ ನೊಂದಾಯಿತ ಕ್ರಯ ಪತ್ರ ದಾಖಲಾತಿ ನಂ.2449/2010-11 ಮತ್ತು

2459/2010-11 ಬಂಧನಕಾರಿಯಾಗಿರುತ್ತವೆ. ಮುಂದುವರೆದು ದಾವಾ ಆಸ್ತಿಗಳಲ್ಲಿ ವಾದಿ ಮತ್ತು ವಾದಿಯ ಸಹೋದರನಾದ ಬಸವರಾಜ ಇತನು ಸ್ವಾಧೀನದಾರರೇ ಇರುತ್ತಾರೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಪ್ರತಿವಾದಿಯರು ವಾದಿಯರ ದಾವಾ ಸ್ವತ್ತಿನ ಸ್ವಾಧೀನತೆಗೆ ತೊಂದರೆ ನೀಡುತ್ತಿರುತ್ತಾರೆಂದು ಈ ನ್ಯಾಯಾಲಯ ಅಭಿಪ್ರಾಯ ಪಡುತ್ತದೆ. ಮುಂದುವರೆದು 1ನೇ ಪ್ರತಿವಾದಿಯಾದ ಶರಣಮ್ಮ ಇವರ ಕುಟುಂಬಕ್ಕೆ ಇನ್ನು ಪಿತ್ರಾರ್ಜಿತ ಆಸ್ತಿಗಳು ಇರುವುದರಿಂದ 2 ರಿಂದ 6ನೇ ಪ್ರತಿವಾದಿಯರು ತಮ್ಮ ಪಾಲನ್ನು ಸದರಿ ಆಸ್ತಿಗಳಲ್ಲಿ ಕೇಳಲು ಹಕ್ಕನ್ನು ಹೊಂದಿರುತ್ತಾರೆ. ಆದ್ದರಿಂದ ಅಸಲು ದಾವಾ ನಂ.191/2016 ರ ವಿವಾದಾಂಶ ನಂ.1 ರಿಂದ 3 ಸಕಾರಾತ್ಮಕವಾಗಿ ಮತ್ತು ವಿವಾದಾಂಶ ನಂ.4 ನ್ನು ನಕಾರಾತ್ಮಕವಾಗಿ ಮತ್ತು ಅಸಲು ದಾವಾ ನಂ.21/2012 ರ ವಿವಾದಾಂಶ ನಂ.1 ನ್ನು ಸಕಾರಾತ್ಮಕವಾಗಿ ಮತ್ತು ವಿವಾದಾಂಶ ನಂ.2 ರಿಂದ 4 ನ್ನು ನಕಾರಾತ್ಮಕವಾಗಿ ಮತ್ತು ಹೆಚ್ಚುವರಿ ವಿವಾದಾಂಶ ನಂ.1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

53. **<u>ಅಸಲು ದಾ ನಂ.191/2016 ವಿವಾದಾಂಶ ಸಂಖ್ಯೆಃ 5</u>** ವಾದಿಯು ದಾವಾ ಸ್ವತ್ತಿನ ಪ್ರಮಾಣೀಕ ಖರೀದಿದಾರರೆಂದು ಮತ್ತು ವಾದಿಯು ದಾವಾ ಸ್ವತ್ತಿನಲ್ಲಿ ಕಾನೂನುಬದ್ದ ಸ್ವಾಧೀನತೆ ಹೊಂದಿರುತ್ತಾರೆಂದು ರುಜುವಾತು ಪಡಿಸಿರುತ್ತಾರೆ. ಮುಂದುವರೆದು ವಾದಿಯು 1ನೇ ಪ್ರತಿವಾದಿಯು ತನ್ನ ಕುಟುಂಬದ ಅಡಚಣಗೋಸ್ಕರ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ. ಸದರಿ 1ನೇ ಪ್ರತಿವಾದಿಯು ವಾದಿಗೆ ಬರೆದುಕೊಟ್ಟ ನೊಂದಾಯಿತ ಕ್ರಯಪತ್ರ ದಾಖಲಾತಿ ನಂ.2449/2010-11 ಮತ್ತು ವಾದಿಯ ಸಹೋದರನಾದ ಬಸವರಾಜ ತಂದೆ ಶರಣಪ್ಪ ಇವರಿಗೆ ಬರೆದುಕೊಟ್ಟ ನೊಂದಾಯಿತ ಮಾರಾಟ ಪತ್ರ ದಾಖಲಾತಿ ನಂ.2459/2010-

11, 2 ರಿಂದ 6 ನೇ ಪ್ರತಿವಾದಿಗೆ ಬಂಧನಕಾರಿ ಇರುತ್ತದೆ. ಪ್ರತಿವಾದಿಯರು ವಾದಿಯರ ದಾವಾ ಸ್ವತ್ತಿನ ಸ್ವಾಧೀನತೆಗೆ ತೊಂದರೆ ನೀಡುತ್ತಿರುವುದರಿಂದ ವಾದಿಯು ಪ್ರತಿವಾದಿಯ ವಿರುದ್ದ ಕೇಳಿದ ನಿರ್ಭಂದಕಾಜ್ಞೆ ಪಡೆಯಲು ಅರ್ಹರು ಇರುತ್ತಾರೆ. ಆದ್ದರಿಂದ ಅಸಲು ದಾವಾ ನಂ.191/2016 ವಿವಾದಾಂಶ ನಂ.5 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

54. **<u>ಅಸಲು ದಾವಾ ನಂ.21/2012 ರ ವಿವಾದಾಂಶ ಸಂಖ್ಯೆ 5 ಮತ್ತು ಅಸಲು ದಾವಾ ನಂ. 191/2016 ರ ವಿವಾದಾಂಶ ನಂ.6:</u>**
ಅಸಲು ದಾವಾ ನಂ. ವಿವಾದಾಂಶ ನಂ.1 ರಿಂದ 5 ಮತ್ತು ಅಸಲು ದಾವಾ ನಂ.21/2012 ರ ವಿವಾದಾಂಶ ನಂ.1 ರಿಂದ 4 ಮತ್ತು ಹೆಚ್ಚುವರಿ ವಿವಾದಾಂಶ ನಂ.1 ರಿಂದ 3 ಕ್ಕೆ ನೀಡಿರುವ ಉತ್ತರಗಳಿಂದ ಅಸಲು ದಾವಾ ನಂ.21/2012 ರ ವಿವಾದಾಂಶ ಸಂಖ್ಯೆ 5 ಮತ್ತು ಅಸಲು ದಾವಾ ನಂ.191/2016 ರ ವಿವಾದಾಂಶ ನಂ.5 ಕ್ಕೆ ನ್ಯಾಯಾಲಯ ಈ ಕೆಳಗಿನಂತೆ ಆದೇಶ ಮಾಡಿರುತ್ತದೆ.

**<u>:ಆದೇಶ:</u>**

ಅಸಲು ದಾವಾ ನಂ. 191/2016 ಈ ದಾವೆಯನ್ನು ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಅಸಲು ದಾವಾ ನಂ. 21/2012 ದಾವೆಯನ್ನು ವಜಾಗೊಳಿಸಲಾಗಿದೆ.

ಅಸಲು ದಾವಾ ನಂ. 191/2016 ರಲ್ಲಿ ದಾವಾ ಆಸ್ತಿಗೆ ವಾದಿಯೇ ಸಂಪೂರ್ಣ ಮಾಲೀಕಳೆಂದು ಮತ್ತು ಸ್ವಾಧೀನದಾರರೆಂದು ಈ ಮೂಲಕ ಘೋಷಣೆ ಮಾಡಲಾಗಿದೆ. ಅಸಲು ದಾವಾ ನಂ. 191/2016 ರಲ್ಲಿ

ದಾವಾ ಆಸ್ತಿಗೆ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಪ್ರತಿವಾದಿಗಳು, ಅವರ ನಂಬುಗೆಯ ಅನುಯಾಯಿಗಳು, ಸಹಾಯಕರು, ಕೆಲಸಗಾರರು, ಅವರ ಪರ ನಡೆದುಕೊಳ್ಳುವವರು, ಧಕ್ಕೆಯುಂಟು ಮಾಡದಂತೆ ಶಾಶ್ವತ ನಿರ್ಭಂಧಕಾಜ್ಞೆಯನ್ನು ವಾದಿಯ ಪರವಾಗಿ ನೀಡುವುದರ ಮುಖಾಂತರ ಸದರಿ ವ್ಯಕ್ತಿಗಳನ್ನು ಶಾಶ್ವತವಾಗಿ ನಿರ್ಭಂಧಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

(ಈ ತೀರ್ಪಿನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲು ಹೇಳಿ ನಂತರ ಓದಿ, ಸೂಕ್ತ ತಿದ್ದುಪಡಿ ಮಾಡಿ ಇಂದು ದಿನಾಂಕ 25-10-2024 ರಂದು ಬಹಿರಂಗ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು).

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
**ಸಿವಿಲ್ ನ್ಯಾಯಾಧೀಶರು.**
**ಜೇವರ್ಗಿ.**

## ಅಸಲು ದಾವಾ ನಂ.191/20169 ಅನುಬಂಧ

### ವಾದಿಯ ಪರವಾಗಿ ಹಾಜರಪಡಿದ ಸಾಕ್ಷಿದಾರರ ಪಟ್ಟಿ

ಪಿಡಬ್ಲ್ಯು-1 ತಾಯಮ್ಮ ಗಂಡ ಮಲ್ಲಿಕಾರ್ಜುನ ದೇಸಾಯಿ

### ವಾದಿ ಪರವಾಗಿ ನಿಶಾನೆಗಳನ್ನು ಗುರುತಿಸಲ್ಪಟ್ಟ ದಸ್ತಾವೇಜುಗಳ ಪಟ್ಟಿ

ನಿಪಿ-1 : ಮಾರಾಟ ಪತ್ರ

ನಿಪಿ-2: ಸರ್ವೆ ನಂ.150 ರ ಪಹಣಿ ಪತ್ರಿಕೆ

ನಿಪಿ-3 ರಿಂದ 5: ಮಾರಾಟ ಪತ್ರ

ನಿಪಿ-6: ಅಸಲು ದಾವಾ ನಂ.21/2012 ರ ಮದ್ಯಂತರ ಅರ್ಜಿಯ ನಂ.5 ರ ಆದೇಶ

KAKB620003692012

ನಿಪಿ-7 ರಿಂದ 21:  ಸರ್ವೆ ನಂ.150 ರ ಪಹಣಿ ಪತ್ರಿಕೆಗಳು

ನಿಪಿ-22 : ಎಂ ಆರ್ ನಂ.ಟಿ-81/2019-20

ನಿಪಿ-23 ರಿಂದ 25 : ಮಾರಾಟ ಪತ್ರ

**ಪ್ರತಿವಾದಿಗಳ ಪರವಾಗಿ ಹಾಜರಪಡಿದ ಸಾಕ್ಷಿದಾರರ ಪಟ್ಟಿ**

ಡಿಡಬ್ಲ್ಯು-1 ಶರಣಮ್ಮ ಗಂಡ ಬಸವರಾಜ ದಾನಾ

**ಪ್ರತಿವಾದಿಗಳ ಪರವಾಗಿ ನಿಶಾನೆಗಳನ್ನು ಗುರುತಿಸಲ್ಪಟ್ಟ ದಸ್ತಾವೇಜುಗಳ ಪಟ್ಟಿ**

ನಿಡಿ-1 ರಿಂದ 5: ಸರ್ವೆ ನಂ.150 ಕೈ ಬರಹ ಪಹಣಿಗಳು

ನಿಡಿ-6 ಮತ್ತು 7: ಮಾರಾಟ ಪತ್ರಗಳು

ನಿಡಿ-8 ರಿಂದ 15: ತಕರಾರು ಅರ್ಜಿಗಳು

ನಿಡಿ-16 : ಎಂ ಆರ್ ನಂ.40/2010-11

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ನ್ಯಾಯಾಧೀಶರು ಜೇವರ್ಗಿ.

Dictated on : 04-04-2026
Transcribed on : 04-04-2026
checked on : 04-04-2026
Signed on : 04-04-2026

KASHINATH VASANT UPPAR
Digitally signed by KASHINATH VASANT UPPAR
Date: 2026.04.10 11:05:13 +0530

(**Kashinath V. Uppar**)
**Civil Judge & JMFC, Jewargi.**

Visit **ecourts.gov.in** for updates or download mobile app "**eCourts Services**" from Android or iOS